ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 43 | ಅಕ್ಟೋಬರ್ 23, 1983 | ಬೆಲೆ 60 ಪೈಸೆ

ಕೇರಳದಲ್ಲಿ ಎಸ್. ಎಫ್. ಐ. ನ ಪ್ರಚಂಡ ವಿಜಯ

ಕೇರಳ ಮತ್ತು ಗಾಂಧೀಜಿ ವಿಶ್ವವಿದ್ಯಾಲಯಗಳಲ್ಲಿ ನಡೆದ ಚುನಾವಣೆಯಲ್ಲಿ ಎಸ್. ಎಫ್. ಐ. 75 ಕೌನ್ಸಿಲರ್ ಸ್ಥಾನ ಗಳಿಸಿದೆ. ಕಾಂಗ್ರೆಸ್ಸಿನ ವಿದ್ಯಾರ್ಥಿ ಸಂಘ 55 ಸ್ಥಾನ ಗಳಿಸಿದರೆ ಆರ್.ಎಸ್.ಎಸ್.ನ ಎ.ಬಿ.ವಿ.ಪಿ.ಗೆ ಒಂದು ಸ್ಥಾನವೂ ಲಭಿಸದಿರುವುದು ಗಮನಾರ್ಹ.

ತಿರುವನಂತಪುರದ ಯೂನಿವರ್ಸಿಟಿ ಕಾಲೇಜ್, ಕಲಾ ಶಾಲೆ, ಸಂಸ್ಕೃತ ಕಾಲೇಜ್, ಕ್ವಿಲಾನ್ ಜಿಲ್ಲೆಯ ಎಸ್. ಎನ್. ಕಾಲೇಜು, ಫಾತಿಮಾ ವನಿತಾ ಕಾಲೇಜ್, ಎರ್ನಾಕುಲಂ ಜಿಲ್ಲೆಯ ಮಹಾರಾಜ ಕಾಲೇಜ್, ಸಂಸ್ಕೃತ ಕಾಲೇಜು, ಶ್ರೀ ಶಂಕರಾ ಕಾಲೇಜ್, ಕ್ಯಾತಲಿಕ್ ಕಾಲೇಜ್‌ಗಳ ಚುನಾವಣೆಯಲ್ಲೂ ಎಸ್. ಎಫ್. ಐ. ಪ್ರಚಂಡ ಜಯಗಳಿಸಿದೆ.

ಬೆಲೆ ಏರಿಕೆ, ಕಾಂಗ್ರೆಸ್ (ಐ.) ಕುತಂತ್ರಕ್ಕೆ ಖಂಡನೆ

ಕರ್ನಾಟಕದ ಜನತೆ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರಕಾರವೊಂದಕ್ಕೆ ಈ ವರ್ಷದ ಜನವರಿಯಲ್ಲಿ ಮತ ಚಲಾಯಿಸಿದರು. ಚುನಾವಣಾ ಒಪ್ಪಂದದ ಸಹಭಾಗಿಗಳಾದ ಸಿ.ಪಿ.ಐ. ಮತ್ತು ಸಿ. ಪಿ. ಐ. (ಎಂ.) ಗಳ ಬೆಂಬಲದೊಂದಿಗೆ ಜನತಾ ಪಕ್ಷ ಅಧಿಕಾರಕ್ಕೆ ಬಂದಿತು. ಬಿ. ಜೆ. ಪಿ. ಕೂಡ ಸರಕಾರ ರಚನೆಗೆ ಬೆಂಬಲ ನೀಡಿತು. ಈ ಸರಕಾರ ತಮ್ಮ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆಂದು ತನ್ನದೇ ಚುನಾವಣಾ ಪ್ರಣಾಳಿಕೆಯನ್ನು ಕಾರ್ಯಗತ ಮಾಡುತ್ತದೆಂದು ಜನತೆ ಬಹಳ ಆಶೋತ್ತರಗಳನ್ನಿಟ್ಟುಕೊಂಡಿತ್ತು.

ಕೆಲವು ಪ್ರಜಾಸತ್ತಾತ್ಮಕ ಕ್ರಮಗಳು :

ಜನತಾ ಸರಕಾರ ಕೆಲವು ಪ್ರಜಾಸತ್ತಾತ್ಮಕ ಕ್ರಮಗಳನ್ನು ಕೈಗೊಂಡಿದೆ. ಬಹಳ ವರುಷಗಳಿಂದ ಮುಂದೂಡಲ್ಪಟ್ಟಿದ್ದ ಕಾರ್ಪೊರೇಷನ್ ಮತ್ತು ಪುರಸಭೆಗಳಿಗೆ ಚುನಾವಣೆ ನಡೆಸಿದೆ. ಕನ್ನಡವನ್ನು ಆಡಳಿತ ಮಾಧ್ಯಮವನ್ನಾಗಿ ಮಾಡಲು ಕ್ರಮಕೈಗೊಳ್ಳುತ್ತಿದೆ. ಭಾಷೆಯ ವಿಷಯದಲ್ಲಿ ಅಲ್ಪ ಸಂಖ್ಯಾತರ ಮತ್ತಿತರ ಜನವಿಭಾಗಗಳ ಭಯವನ್ನು ದೂರ ಮಾಡಿದೆ. ವೃತ್ತಿ ತೆರಿಗೆಯನ್ನು ಭಾಗಶಃ ತೆಗೆದುಹಾಕಿದೆ. ಹಳ್ಳಿಗಳಲ್ಲಿ ಕುಡಿಯುವ ನೀರೊದಗಿಸುವ ಕಾರ್ಯ ನಡೆಸುತ್ತಿದೆ. ರೈತ ಸಮುದಾಯದ ಕೆಲ ವಿಭಾಗಗಳಿಗೆ ಪರಿಹಾರ ದೊರಕಿಸಲಾಗಿದೆ. ಆದರೆ ಈ ಸರಕಾರ ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ವಶಪಡಿಸಿಕೊಳ್ಳುವ ಮತ್ತು ಪಡಿತರ ಪದ್ಧತಿಯನ್ನು ರಾಜ್ಯಾದ್ಯಂತ ವಿಸ್ತರಿಸುವ ಕೆಲಸ ಮಾಡಲಿಲ್ಲ. ಈ ಕ್ರಮಗಳು ಬೆಲೆ ಏರಿಕೆಯನ್ನು ತಡೆಗಟ್ಟುವುದರಲ್ಲಿ ಬಹಳ ಸಹಾಯ ಮಾಡುತ್ತಿದ್ದವು.

ಬೆಲೆ ಏರಿಕೆ :

ಹಿಂದಿನ ಕಾಂಗ್ರೆಸ್ ಸರಕಾರ ನೆರೆಯ ರಾಜ್ಯಗಳಿಗೆ ಅಕ್ಕಿ ಸಾಗಿಸಲು ಮಿತಿಯಿಲ್ಲದೆ ನೀಡಿದ ಪರ್ಮಿಟ್ಟುಗಳು ; ಲೆವಿ ಭತ್ತ ಮತ್ತು ಅಕ್ಕಿ ಸಂಗ್ರಹ ಮಾಡದೇ ಹೋದದ್ದು ; ಜೊತೆಗೆ ಕೇಂದ್ರ ಸರಕಾರದ ತೆರಿಗೆ ನೀತಿ ಸಗಟು ವ್ಯಾಪಾರವನ್ನು ಸರಕಾರ ಕೈವಶ ಮಾಡಿಕೊಳ್ಳದಿರುವ ಪರಿಸ್ಥಿತಿಯಲ್ಲಿ ಬೆಲೆ ಏರಿಕೆಗೆ ಕಾರಣವಾಗಿವೆ. ಆದರೆ ರಾಜ್ಯ ಸರ್ಕಾರ ತನ್ನ ಮಿತಿಯಲ್ಲಿ ತೆಗೆದುಕೊಳ್ಳಬಹುದಾದ ಬೆಲೆ ಏರಿಕೆ ತಡೆ ಕ್ರಮಗಳನ್ನು ಕೈಗೊಂಡಿಲ್ಲ.

ಹಾಗೆಂದ ಮಾತ್ರಕ್ಕೆ ರಾಜ್ಯ ಸರಕಾರ ಪಡಿತರದ ಅಕ್ಕಿ ಪ್ರಮಾಣವನ್ನು ಕಡಿಮೆ ಮಾಡಿ ಬೆಲೆ ಜಾಸ್ತಿ ಮಾಡಿರುವುದನ್ನು ಹಾಲಿನ ಬೆಲೆ ಏರಿಸಲು, ವಿದ್ಯುತ್ ದರ ಏರಿಸಲು ಬಸ್ ದರಗಳನ್ನು ಏರಿಸಲು ಅವರು ಕೊಟ್ಟಿರುವ ಕಾರಣಗಳನ್ನು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ಒಪ್ಪಲಾಗುವುದಿಲ್ಲ. ಈ ಬೆಲೆ ಏರಿಕೆಯನ್ನು ಖಂಡಿಸುತ್ತದೆ. ಮತ್ತು ತೀವ್ರ ವಿರೋಧವನ್ನು ಸೂಚಿಸುತ್ತದೆ.

ಸಾಮಾನ್ಯ ವಿದ್ಯುತ್ ಬಳಕೆದಾರರಿಗಾಗಲೀ, ಎ.ಇ.ಎಚ್. ಬಳಕೆದಾರರಿಗಾಗಲೀ, ಮಧ್ಯಮ ವರ್ಗದ ರೈತರಿಗಾಗಲೀ, ಸಣ್ಣ ಕೈಗಾರಿಕೆಗಳಿಗಾಗಲಿ ವಿದ್ಯುತ್ ದರ ಏರಿಸುವುದನ್ನು ವಿರೋಧಿಸುತ್ತದೆ.

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷವು ಹಾಲಿನ ಉತ್ಪಾದಕರಿಗೆ ಹೆಚ್ಚು ಬೆಲೆ ನೀಡಬೇಕೆಂದೂ ಮತ್ತು ಸರಕಾರವೇ ಸಬ್ಸಿಡಿ ನೀಡಿ ಬಳಕೆದಾರರಿಗೆ ಲೀಟರಿಗೆ ರೂ. 2-80 ರ ದರದಲ್ಲಿ ಒದಗಿಸಬೇಕೆಂದೂ ಒತ್ತಾಯಿಸುತ್ತೇವೆ. ಅಸಂಖ್ಯಾತ ಬಡ ಜನರಿಗೆ ಅರೆ ಪೋಷಣೆಯ ರೋಗಗಳಿಂದ ತಪ್ಪಿಸಿಕೊಳ್ಳಲು ಸ್ವಲ್ಪವಾದರೂ ಹಾಲು ಸಿಗುವಂತೆ ಮಾಡಲು ಇದು ಅತ್ಯಂತ ಅವಶ್ಯಕ.

ಪಕ್ಷಾಂತರದ ಪಿಡುಗು :

ಹೀಗೆ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯ ದುರ್ಲಾಭ ಪಡೆದು ತೂಗುಯ್ಯಾಲೆಯಲ್ಲಿರುವ ಶಾಸಕರನ್ನು ಸೆಳೆಯುವ ಪ್ರಯತ್ನಗಳು ಬಿರುಸಾಗಿವೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ದಕ್ಷಿಣ ಮುಖ್ಯಮಂತ್ರಿಗಳ ಸಭೆಯನ್ನು ಕರೆದಿದ್ದು ಮತ್ತು ಕೇಂದ್ರ - ರಾಜ್ಯ ಸಂಬಂಧದ ಬಗ್ಗೆ ವಿಚಾರ ಸಂಕಿರಣವನ್ನು ನಡೆಸಿದ್ದು ಕಾಂಗ್ರೆಸ್ ಪಕ್ಷದ ಕೇಂದ್ರ ಮತ್ತು ರಾಜ್ಯ ಘಟಕಗಳಿಗೆ ಬೇನೆಯಾಗಿ ಸರ್ಕಾರವನ್ನು ಕಂಗೆಡಿಸಲು ಇದನ್ನೊಂದು ಸಾಧನವಾಗಿ ಬಳಸುತ್ತಿವೆ. ಕಾಂಗ್ರೆಸ್ಸಿನ ಈ ಪಕ್ಷಾಂತರ ತಂತ್ರವನ್ನು ಸಿ.ಪಿ.ಐ.(ಎಂ.) ಖಂಡಿಸುತ್ತದೆ. ಪಕ್ಷಾಂತರದ ಬಗ್ಗೆ ಜನತೆ ಎಚ್ಚರದಿಂದಿರಬೇಕು.

ವಿಜಯನಗರದ ಉಕ್ಕು :

ವಿಜಯನಗರದ ಉಕ್ಕು ಕಾರ್ಖಾನೆಗಾಗಿ ಸಾಮೂಹಿಕ ಚಳುವಳಿಯಾಗಲೀ ಸರ್ವಪಕ್ಷ ಪ್ರತಿನಿಧಿಗಳನ್ನು ದೆಹಲಿಗೆ ಒಯ್ಯುವುದಾಗಲೀ ಅವಶ್ಯವಿಲ್ಲವೆಂಬ ವೀರಪ್ಪ ಮೊಯಿಲಿಯವರ ಮಾತನ್ನು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ಒಪ್ಪುವುದಿಲ್ಲ. ನಮ್ಮ ರಾಜ್ಯದ ಅಭಿವೃದ್ಧಿಗಾಗಿ ಮತ್ತು ವಿಜಯನಗರ ಉಕ್ಕು ಕಾರ್ಖಾನೆಗಾಗಿ ಹೆಚ್ಚು ಹಣವನ್ನು ಪಡೆಯಲು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಬೇಕೆಂದು ಜನತಾ ಪಕ್ಷವನ್ನು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ಒತ್ತಾಯಿಸುತ್ತದೆ.

ಉದ್ಯೋಗಾವಕಾಶ ಮತ್ತು ಕನಿಷ್ಟ ಕೂಲಿ :

ನಮ್ಮ ರಾಜ್ಯದಲ್ಲಿರುವ ಸಾವಿರಾರು ಸ್ಟೈಪೆಂಡರಿಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಮತ್ತು ತತ್‌ಕ್ಷಣದಿಂದಲೇ ಅವರ ಸ್ಟೈಪೆಂಡನ್ನು ಏರಿಸಬೇಕೆಂದು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ಒತ್ತಾಯಿಸುತ್ತದೆ.

(8ನೇ ಪುಟ ನೋಡಿ)

ನಾಲ್ಕು ದಶಕಗಳ ಕಾಲ ರೈತ-ಕಾರ್ಮಿಕರಿಗಾಗಿ ದುಡಿದು ಅಗಲಿದ

ಕಾ. ಬಿ. ಕೊರಗಪ್ಪ ರೈ ಅವರಿಗೆ ಕೆಂಪು ನಮನಗಳು

ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳವಳಿಯ, ರೈತ-ಕಾರ್ಮಿಕ ಚಳವಳಿಯ ಸ್ಥಾಪಕ ಹೋರಾಟಗಾರರಲ್ಲೊಬ್ಬರಾಗಿದ್ದ ಕಾ. ಬಿ. ಕೊರಗಪ್ಪ ರೈ ಅವರು ದೀರ್ಘ ಅಸ್ವಸ್ಥತೆಯ ನಂತರ ಅಕ್ಟೋಬರ್ 18 ರಂದು ಮಂಗಳೂರಿನಲ್ಲಿ ನಿಧನರಾದರು.

ಮಂಗಳೂರು ನಗರಸಭಾ ಸದಸ್ಯರಾಗಿಯೂ, ಮಂಗಳೂರು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿಯೂ ಪ್ರಶಂಸನೀಯ ಸೇವೆ ಸಲ್ಲಿಸಿದ್ದ ಕಾ. ರೈ ಅವರು ಮೊದಲಿಗೆ ಮಂಗಳೂರಿನ ಹೆಂಚಿನ ಕಾರ್ಖಾನೆಯೊಂದರಲ್ಲಿ ಸಾಮಾನ್ಯ ಕಾರ್ಮಿಕರಾಗಿದ್ದು ಕ್ರಾಂತಿಕಾರೀ ಚಳವಳಿಯೊಂದಿಗೆ ಸಂಪರ್ಕ ಬೆಳೆಸಿ, ರೈತ-ಕಾರ್ಮಿಕರಿಗಾಗಿ ದುಡಿದು ಮರಿತ ರಾಜಕೀಯ ಮುಂದಾಳಾಗಿ ಬೆಳೆದು ಬಂದ ರೀತಿ ವಿಶಿಷ್ಟವಾದುದು.

ದಕ್ಷಿಣ ಕನ್ನಡ ಜಿಲ್ಲೆಯ ರೈತ-ಕಾರ್ಮಿಕ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು ಒಂದೂವರೆ ದಶಕಗಳ ಕಾಲ ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿಯಾಗಿದ್ದು ಇತ್ತೀಚಿಗೆ ಅದರ ಉಪಾಧ್ಯಕ್ಷರಾಗಿದ್ದರು.

ಅವಿಭಾಜಿತ ಕಮ್ಯೂನಿಸ್ಟ್ ಪಕ್ಷದಲ್ಲಿ ಪರಿಷ್ಕರಣವಾದದ ವಿರುದ್ಧ ನಡೆದ ಹೋರಾಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯ ಪಾತ್ರವನ್ನು ವಹಿಸಿ ಅವರು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದೊಂದಿಗೆ ಉಳಿದರು. 1967 ರಲ್ಲಿ ಪಕ್ಷದೊಳಗೆ ದುಸ್ಸಾಹಸವಾದ ಮತ್ತು ಪಂಥವಾದಗಳು ತಲೆಯೆತ್ತಿದಾಗ ಕಾ. ರೈ ದೃಢವಾಗಿ ಮಾರ್ಕ್ಸ್‌ವಾದ–ಲೆನಿನ್ ವಾದದೊಂದಿಗೆ ನಿಂತು ಈ ಅಪ ಮಾರ್ಗಗಳ ವಿರುದ್ಧ ಸತತ ಹೋರಾಟ ನಡೆಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರ ಕಾ. ರೈ. ಹಲವು ವರ್ಷಗಳ ಜೈಲು ವಾಸವನ್ನು ಅನುಭವಿಸಿದರು. ಸ್ವಲ್ಪ ಕಾಲ ಭೂಗತ ಜೀವನವನ್ನೂ ನಡೆಸಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ ನಡೆದ ದಬ್ಬಾಳಿಕೆಯ ಸಮಯದಲ್ಲಿ ಕಾ. ರೈ ಅವರು ಕಾ. ಎ. ಕೆ. ಜಿ. ಮತ್ತು ಕಾ. ಪಿ. ರಾಮಮೂರ್ತಿ ಅವರೊಂದಿಗೆ ಕಡಲೂರು ಜೈಲಿನಲ್ಲಿ ರಾಜಕೀಯ ಕೈದಿಯಾಗಿದ್ದರು.

1951–52 ರಲ್ಲಿ ಕಾ. ಎ. ಕೃಷ್ಣ ಶೆಟ್ಟಿ ಮತ್ತು ಕಾ. ವಾಮನ ಕೂಡಿಯಾಲ ಬೈಲ್ ಅವರೊಂದಿಗೆ ಸುಮಾರು ಎರಡು ವರ್ಷಗಳ ಕಾಲ ಕಾರಾಗೃಹದಲ್ಲಿದ್ದರು.

1964 ರಿಂದ ಮೊನ್ನೆಯವರೆಗೆ ಕಾ. ರೈ ಅವರು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ದಕ್ಷಿಣಕನ್ನಡ ಜಿಲ್ಲಾ ಸಮಿತಿಯ ಸೆಕ್ರೆಟಾರಿಯೇಟ್ ಸದಸ್ಯರಾಗಿದ್ದರು.

ಕಾ. ರೈ ಅವರ ನಿಧನದಿಂದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಹಾಗೆಯೇ ರೈತ ಕಾರ್ಮಿಕ ಚಳವಳಿಗೆ ತುಂಬಲಾರದ ನಷ್ಟವಾಗಿದೆ. ಸಿ.ಪಿ.ಐ. (ಎಂ.) ಕರ್ನಾಟಕ ರಾಜ್ಯ ಸಮಿತಿ ಅಗಲಿದ ಹಿರಿಯ ಸಂಗಾತಿಗೆ ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತದೆ ಮತ್ತು ಅವರ ಕುಟುಂಬದವರ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

ಕಾ. ಕೊರಗಪ್ಪ ರೈ ಅವರ ನಿಧನಕ್ಕೆ ಸಿ.ಐ.ಟಿ.ಯು. ನ ರಾಜ್ಯ ಸಮಿತಿ, ಕರ್ನಾಟಕ ಪ್ರಾಂತ ರೈತ ಸಂಘ, ಎಸ್. ಎಫ್.ಐ. ಹಾಗೂ ಡಿ.ವೈ.ಎಫ್.ಐ. ಗಳು ತಮ್ಮ ಸಂತಾಪವನ್ನು ವ್ಯಕ್ತಪಡಿಸಿವೆ.

ಚಿಕ್ಕಮಗಳೂರಿನ ಕೆ.ಪಿ.ಪಿ.ಡಬ್ಲ್ಯು. ಯೂನಿಯನ್ ಕಾ. ರೈ ಅವರ ನಿಧನಕ್ಕೆ ಸಂಬಂಧಿಸಿ ಸಭೆ ಏರ್ಪಡಿಸಿ ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ.

ಮೃತರ ಅಂತಿಮ ಯಾತ್ರೆಯಲ್ಲಿ ಮಂಗಳೂರಿನ ರೈತ – ಕಾರ್ಮಿಕರು, ವಿದ್ಯಾರ್ಥಿ ಯುವ ಜನರು ಸಾವಿರ ಸಂಖ್ಯೆಯಲ್ಲಿ ಭಾಗವಹಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ಅಕ್ಟೋಬರ್ ೫ ರಂದು

ತೋಟ ಕಾರ್ಮಿಕರಿಂದ ಬೇಡಿಕೆ ದಿನಾಚರಣೆ

ಚಿಕ್ಕಮಗಳೂರು

ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಫೆಡರೇಶನ್ನಿನ ಕರೆಯ ಪ್ರಕಾರ ಕರ್ನಾಟಕದಲ್ಲಿ ಪ್ಲಾಂಟೇಶನ್ ಕಾರ್ಮಿಕರು ಅಕ್ಟೋಬರ್ 5 ರಂದು ಅಖಿಲ ಭಾರತ ಬೇಡಿಕೆಗಳ ದಿನವನ್ನು ಆಚರಿಸಿದರು. ಅಂದು ಚಿಕ್ಕಮಗಳೂರು ನಗರದಲ್ಲಿ 500 ಕ್ಕು ಹೆಚ್ಚು ಪ್ಲಾಂಟೇಶನ್ ಹಾಗೂ ಕಾಫಿ ಕ್ಯೂರಿಂಗ್ ಕಾರ್ಮಿಕರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ತಮ್ಮ ಬೇಡಿಕೆಗಳ ಬಗ್ಗೆ ಹಾಗೂ ಬೆಲೆಯೇರಿಕೆ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಈ ಬೇಡಿಕೆಗಳನ್ನು ಒಳಗೊಂಡ ಕರಪತ್ರಗಳನ್ನು ಎಲ್ಲೆಡೆ ಹಂಚಿದರು. ಮೆರವಣಿಗೆಕಾರರು ಜಿಲ್ಲಾಧಿಕಾರಿಯವರ ಕಚೇರಿಯ ಮುಂದೆ ಪ್ರದರ್ಶನ ನಡೆಸಿದರು. ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ನಿನ ಪರವಾಗಿ ಕಾ. ಸಿ. ನಂಜುಂಡಪ್ಪ, ಕಾ. ಎ. ಕೆ. ವಿಶ್ವನಾಥ್, ಕಾ. ಎ. ಸಿ. ಕೇಶವ, ಕಾ. ಕೆ. ಸುಕುಮಾರ್ ಇವರನ್ನೊಳಗೊಂಡ ಶಿಷ್ಟ ಮಂಡಳಿಯು ಜಿಲ್ಲಾಧಿಕಾರಿಣಿ ಶ್ರೀಮತಿ ಶಾಂತ ಕುಮಾರಿ ದೇವರಾಜ್ ಅವರನ್ನು ಭೇಟಿ ಮಾಡಿ ಕೇಂದ್ರ ಸರ್ಕಾರದ ಕಾರ್ಮಿಕ ಸಚಿವ ಶ್ರೀ ವೀರೇಂದ್ರ ಪಾಟೀಲ್ ಕರ್ನಾಟಕ ಸರ್ಕಾರದ ತಾತ್ಕಾಲಿಕ ಕಾರ್ಮಿಕ ಸಚಿವ ಶ್ರೀ ಎಂ. ರಘುಪತಿ ಅವರಿಗೆ ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಫೆಡರೇಶನ್ನಿನ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಅರ್ಪಿಸಿದರು.

ಅವರು ಬೆಲೆಯೇರಿಕೆಯನ್ನು ತಡೆಹಿಡಿಯಲು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಬೇಕೆಂದು, ಅಕ್ಕಿ, ಮೊದಲಾದ ದಿನಬಳಕೆಯ ವಸ್ತುಗಳನ್ನು ಅಗ್ಗ ದರದ ನಿರ್ದಿಷ್ಟ ಬೆಲೆಗಳಿಗೆ ಪೇಟೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶ್ರೀಸಾಮಾನ್ಯರಿಗೆ ಸದಾಕಾಲವೂ ಒದಗಿಸುವ ವ್ಯವಸ್ಥೆ ಮಾಡಬೇಕೆಂದು, ಕಾಳ ಸಂತೆಕೋರರು, ಅಕ್ರಮ ದಾಸ್ತಾನುಗಾರರು, ಕಳ್ಳಸಾಗಣೆದಾರರು ಮತ್ತು ಸಟ್ಟಾ ವ್ಯಾಪಾರಿಗಳ ವಿರುದ್ಧ ಹಾಗೂ ಭ್ರಷ್ಟ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುವ ಮನವಿ ಪತ್ರವನ್ನು ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆ ಅವರಿಗೆ ಸಲ್ಲಿಸಿದರು.

ಕೊನೆಯಲ್ಲಿ ನೆರೆದ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕಾ. ಸಿ. ನಂಜುಂಡಪ್ಪನವರು ಕೇಂದ್ರ ಸರ್ಕಾರದ ಆರ್ಥಿಕ ನೀತಿ ಬದಲಾದ ಹೊರತು ಬೆಲೆಯೇರಿಕೆ ಹೀಗೇ ಮುಂದುವರಿಯುವುದು ಎಂದ ಅವರು ಬರುವ ದಿನಗಳಲ್ಲಿ ಬೆಲೆಯೇರಿಕೆ ವಿರುದ್ಧ ವಿಶಾಲ ಹೋರಾಟ ನಡೆಸಲು ಸಿದ್ಧರಾಗಬೇಕೆಂದು ಈ ಹೋರಾಟದಲ್ಲಿ ಕಾರ್ಮಿಕ ವರ್ಗವು ಇಡೀ ಜನತೆಗೆ ನೇತೃತ್ವ ಕೊಡಲು ಸಿದ್ಧರಾಗಬೇಕೆಂದು ಕರೆ ಕೊಟ್ಟರು.

ಸಕಲೇಶಪುರ

ಕರ್ನಾಟಕ ತೋಟ ಕಾರ್ಮಿಕ ಸಂಘದ ಆಶ್ರಯದಲ್ಲಿ ಹಾಸನ ಜಿಲ್ಲೆಯ ಪ್ಲಾಂಟೇಶನ್ ಕಾರ್ಮಿಕರು 5–10–83 ರಂದು ಸಕಲೇಶಪುರದಲ್ಲಿ ಮೆರವಣಿಗೆ ನಡೆಸಿ, ಕರಪತ್ರಗಳನ್ನು ಹಂಚಿ ಅಖಿಲ ಭಾರತ ಬೇಡಿಕೆಗಳ ದಿನವನ್ನು ಆಚರಿಸಿದರು. ಕರ್ನಾಟಕ ತೋಟ ಕಾರ್ಮಿಕ ಸಂಘದ ಪರವಾಗಿ ಕಾ. ವಿ. ಸುಕುಮಾರ್, ಕಾ. ಪಾಲ್ ಡಿಸೋಜ ಮತ್ತು ಕಾ. ದೊಜರವರನ್ನೊಳಗೊಂಡ ಶಿಷ್ಟ ಮಂಡಳಿಯ ಸಕಲೇಶಪುರದ ಉಪ ವಿಭಾಗಾಧಿಕಾರಿಯವರನ್ನು ಭೇಟಿಯಾಗಿ ಮನವಿಪತ್ರವನ್ನು ಅರ್ಪಿಸಿದರು.

ಕೊನೆಯಲ್ಲಿ ಮೆರವಣಿಗೆಕಾರರನ್ನು ಉದ್ದೇಶಿಸಿ ಕಾ. ವಿ. ಸುಕುಮಾರ್ ಅವರು ಮಾತನಾಡಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ತೋಟ ಕಾರ್ಮಿಕರು ಮುಂಬರುವ ಹೋರಾಟಗಳಲ್ಲಿ ಭಾಗವಹಿಸಲು ಈಗಿನಿಂದಲೇ ಸಿದ್ಧರಾಗಬೇಕೆಂದು ಕರೆ ಕೊಟ್ಟರು,

ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಫೆಡರೇಶನ್ನಿನ ಬೇಡಿಕೆಗಳ ಪಟ್ಟಿಯು ಮುಚ್ಚಿರುವ ಮತ್ತು ಬೀಗಮುದ್ರೆಗೆ ಒಳಗಾಗಿರುವ ತೋಟಗಳನ್ನು ಕೇಂದ್ರ ಸರ್ಕಾರವೇ ವಹಿಸಿಕೊಂಡು ನಡೆಸಬೇಕು ತೋಟ ಕಾರ್ಮಿಕರ ಕನಿಷ್ಟ ಮಾಸಿಕ ಕೂಲಿ 500 ರೂಪಾಯಿಗಳಾಗಬೇಕು, ಎರಡು ಎಕರೆ ತೋಟಕ್ಕೆ ಮೂವರು ಕಾರ್ಮಿಕರಿರಬೇಕು, ತೆಂಗು, ಅಡಿಕೆ, ಲವಂಗ, ಬೊಂಬು, ಗೇರುಹಣ್ಣು, ಮೆಣಸು,,ಕಿತ್ತಲೆ, ಮರಗೆಣಸು, ಏಲಕ್ಕಿ ಲಿನೋಲಿಯಂ ಮತ್ತು ಇತರ ಸುಗಂಧದ ಎಣ್ಣೆಗಳನ್ನು ತಯಾರಿಸುವ ಗಿಡಗಳು, ಔಷಧಿಗಳನ್ನು ತಯಾರಿಸುವ ಗಿಡಗಳು ಮೊದಲಾದ ತೋಟಗಳಲ್ಲಿರುವ ಕಾರ್ಮಿಕರಿಗೂ ಪ್ಲಾಂಟೇಶನ್ ಲೇಬರ್ ಆಕ್ಟ್ ಅನ್ವಯವಾಗಬೇಕು. ತೋಟಗಳಲ್ಲಿ ಕಾರ್ಮಿಕರ ಮನೆಗಳು, ಕುಡಿಯುವ ನೀರು ಮತ್ತು ವೈದ್ಯಕೀಯ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಪ್ಲಾಂಟೇಶನ್ ಲೇಬರ್ ಆಕ್ಟನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು, ಶಿಶುವಿಹಾರ ಸೌಲಭ್ಯ ಐವರು ಮಹಿಳಾ ಕಾರ್ಮಿಕರಿರುವ ತೋಟಗಳಲ್ಲೂ ಸಿಗಬೇಕು, ಮನೆಗಳು ಬಿದ್ದು ಸಾವುಂಟಾಗುವ ಅಥವ ಗಾಯಗಳಾಗುವ ಎಲ್ಲಾ ಸಂದರ್ಭಗಳಲ್ಲೂ ಪರಿಹಾರ ಸಿಗಬೇಕು. ಕಾನೂನು ಜಾರಿ ಮಾಡದೆ ಉಲ್ಲಂಘನೆ ಮಾಡಿರುವ ಪ್ಲಾಂಟರುಗಳಿಗೆ ಜೈಲು ಶಿಕ್ಷೆ ಕಡ್ಡಾಯವಾಗಬೇಕು,. ದೊಡ್ಡ ತೋಟಗಳನ್ನು ಮತ್ತು ಪ್ಲಾಂಟೇಶನ್ ಉತ್ಪನ್ನಗಳ ವ್ಯಾಪಾರವನ್ನು ರಾಷ್ಟ್ರೀಕರಿಸಬೇಕು ಎಂಬ ಬೇಡಿಕೆಗಳನ್ನು ಒಳಗೊಂಡಿದ್ದಿತು.

ಈ ಚಳವಳಿಯ ಮುಂದಿನ ಹಂತವಾಗಿ ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಫೆಡರೇಶನ ಮುಂದಿನ ಮಾರ್ಚಿ ತಿಂಗಳಲ್ಲಿ ನವದೆಹಲಿಯಲ್ಲಿ ತೋಟ ಕಾರ್ಮಿಕರ ಸಾಮೂಹಿಕ ನಿಯೋಗವೊಂದು ಕೇಂದ್ರ ಕಾರ್ಮಿಕ ಹಾಗೂ ವಾಣಿಜ್ಯ ಸಚಿವರುಗಳನ್ನು ಭೇಟಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಬಂಟ್ವಾಳ:

ಮೂರ್ತೆದಾರರ ಮನವಿ

ಹಲವು ವರ್ಷಗಳಿಂದ ಬಂಟ್ವಾಳ ತಾಲ್ಲೂಕಿನ ಬಡ ಮೂರ್ತೆದಾರರು ತಯಾರಿಸಿದ ಶೇಂದಿಯನ್ನು ಪ್ರತಿ ಗ್ರಾಮಗಳಲ್ಲಿರುವ ಶೇಂದಿ ಗುತ್ತಿಗೆಯ ಹತ್ತಿರದ ಬ್ರಾಂಚುಗಳಿಗೆ ಕೊಡುತ್ತಿದ್ದರು. ಇದರಿಂದ ಮುರ್ತೆಧಾರರಿಗೆ ಗ್ರಾಮದ ಮುಖ್ಯ ಗುತ್ತಿಗೆಗೆ ನಾಲ್ಕೈದು ಮೈಲುಗಳಷ್ಟು ನಡೆದುಕೊಂಡು ಹೋಗಿ ಶೇಂದಿ ಕೊಡುವ ಕಷ್ಟಕರ ಪರಿಸ್ಥಿತಿಯು ತಪ್ಪಿಹೋಗಿತ್ತು.

ಈ ವರ್ಷ ತಾಲ್ಲೂಕಿನ ಗ್ರಾಮಗಳಲ್ಲಿರುವ ಎಲ್ಲಾ ಶೇಂದಿ ಗುತ್ತಿಗೆದಾರರು ಪ್ರತಿ ಗ್ರಾಮದಲ್ಲಿರುವ ಶೇಂದಿ ಬ್ರಾಂಚುಗಳನ್ನು ಮುಚ್ಚುವುದರ ಮೂಲಕ ಬಡ ಮುರ್ತೆದಾರರು ತುಂಬಾ ಕಷ್ಟಕ್ಕೊಳಗಾಗಿದ್ದಾರೆ.

ಪ್ರತೀ ಗ್ರಾಮದ ಶೇಂದಿ ಗುತ್ತಿಗೆಗಳಿಗೆ ಈ ಮೊದಲು ಇದ್ದ ಸಬ್ ಬ್ರಾಂಚುಗಳನ್ನು ತೆಗೆದು ಬಡ ಮೂರ್ತೆದಾರರನ್ನು ಸಂಕಷ್ಟದಿಂದ ಪಾರು ಮಾಡಬೇಕೆಂದು ಮನವಿಯನ್ನು ಬಂಟ್ವಾಳ ತಾಲ್ಲೂಕು ರೈತ ಸಂಘದ ನೇತೃತ್ವದಲ್ಲಿ ಮೂರ್ತೆದಾರರನ್ನೊಳಗೊಂಡ ಶಿಷ್ಟ ಮಂಡಲವು ತಾಲೂಕು ತಹಶೀಲ್ದಾರರನ್ನು ಕಂಡು, ಮೂರ್ತೆದಾರರ ಸಮಸ್ಯೆಗಳಿಗೆ ಸಂಬಂಧಪಟ್ಟ ಮನವಿಯನ್ನು ತಾ॥ 30–9–1983 ರಂದು ಸಲ್ಲಿಸಲಾಯಿತು.

ತಹಶೀಲ್ದಾರರು ಮನವಿಯನ್ನು ಸ್ವೀಕರಿಸಿ ಈ ಬಗ್ಗೆ ಶೇಂದಿ ಗುತ್ತಿಗೆದಾರರ ಸಭೆ ಕರೆದು ಚರ್ಚಿಸಿ, ಗುತ್ತಿಗೆದಾರರ ಮತ್ತು ಮೂರ್ತೆದಾರರ ಜಂಟಿ ಸಭೆಯನ್ನು ಕರೆದು ಮೂರ್ತೆದಾರರ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ನೀಡುವುದಾಗಿ ಶಿಷ್ಟ ಮಂಡಲಕ್ಕೆ ಭರವಸೆಯಿತ್ತರು,

---

ಹೂವಿನ ಹಡಗಲಿಯಲ್ಲಿ

ಭೂಹೀನರ ಮೆರವಣಿಗೆ

ದಿ. 10–9–83 ರಂದು ಬಳ್ಳಾರಿ ಜಿಲ್ಲೆಯ ಕೋಮಾರ್ನಹಳ್ಳಿ ತಾಂಡದ 100 ಜನ ಭೂಹೀನರನ್ನು ಸರ್ಕಾರಿ ಭೂಮಿಯನ್ನು ಆಕ್ರಮಿಸಿದ್ದಕ್ಕಾಗಿ ಬಂಧಿಸಲಾಗಿತ್ತು. ಬಂಧಿತರನ್ನು ದಿ. 29-9-83 ರನ್ನು ಬಿಡುಗಡೆಮಾಡಲಾಯಿತು. ನಂತರ ಕಾ॥ ವಿ. ಎನ್. ಹಳಕಟ್ಟಿಯವರ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ನಡೆದು ನಂತರ ಸಭೆಯನ್ನು ಉದ್ದೇಶಿಸಿ ವಕೀಲ ಶ್ರೀ ವೀರನಗೌಡರು ಮಾತನಾಡಿರದು.

ದಿ. 30–9–83 ರಂದು ತಾಂಡದಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾ॥ ಹಳಕಟ್ಟಿ, ಕಾ॥ ವೆಂಕಟೇಶ್, ಕಾ॥ ಪರಶುರಾಂ ಮಾತನಾಡಿದರು.

ಕುಂದಾಪುರ:

ವಾರಾಹಿ ಕಾರ್ಮಿಕರ ಜಾಥಾ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೊಸಂಗಡಿಯಲ್ಲಿರುವ ವಾರಾಹಿ ಯೋಜನೆ ನಿವೇಶನದಲ್ಲಿ ಸೆಪ್ಟಂಬರ್ 21 ರಿಂದ 600 ಮಂದಿ ಕೆಲಸಗಾರರು ಉತ್ತಮ ಸೇವಾ ಸೌಲಭ್ಯ ಕೂಲಿ ಹೆಚ್ಚಳ ಹಾಗೂ ಮಾಲಿಕರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಹೋರಾಟ ಆರಂಭಿಸಿದರು.

ತಮ್ಮ ನ್ಯಾಯಯುತ ಬೇಡಿಕೆಗಳ ಬಗ್ಗೆ ಸಾರ್ವಜನಿಕರ ಸಹಾನುಭೂತಿ ಪಡೆಯಲು ಮತ್ತು ಅಧಿಕಾರಿಗಳ ಗಮನ ಸೆಳೆಯಲು 300 ಮಂದಿ ಕೆಲಸಗಾರರು ತಾರೀಖು 29-9-1983ರಂದು ರಾತ್ರಿ 10 ಗಂಟೆಗೆ ಹೊಸಂಗಡಿಯಿಂದ ಕಾಲ್ನಡಿಗೆಯಲ್ಲಿ ಮೆರವಣಿಗೆ ಹೊರಟು ಮಳೆಯನ್ನು ಲೆಕ್ಕಿಸದೆ 48 ಕಿ.ಮಿ. ದೂರ ನಡೆದು, ತಾ॥ 30–9–1983 ಬೆಳಿಗ್ಗೆ ಕುಂದಾಪುರವನ್ನು ತಲುಪಿ ಇಲ್ಲಿನ ಮುಖ್ಯ ರಸ್ತೆಗಳಲ್ಲಿ ಘೋಷಣೆ ಸಹಿತ ಮೆರವಣಿಗೆ ನಡೆಸಿ ಅಸಿಸ್ಟೆಂಟ್ ಕಮಿಶನರ್‌ರವರ ಕಛೇರಿಯ ಮುಂದೆ ಧರಣಿ ಕುಳಿತು ಮನವಿಯನ್ನು ಅರ್ಪಿಸಿದರು. ಸಂಜೆ ನಡೆದ ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಂದಾಳು ಕೃಷ್ಣಮೂರ್ತಿಯವರು ಮತ್ತು ಸಿ. ಐ. ಟಿ. ಯು. ಮುಂದಾಳು ಕಾಂ. ಸಿ. ನಾರಾಯಣ, ಕಾಂ. ಕೆ. ಶಂಕರ, ಕಾಂ. ಅಬ್ರಹಾಂ ಕರ್ಕಡ ಮಾತನಾಡಿದರು.

ನೇಕಾರರ ವಾರ್ಷಿಕ ಸಭೆ

ಉಡುಪಿ ನೇಯ್ಗೆ ಕೆಲಸಗಾರರ ಸಂಘದ (ಸಿ.ಐ.ಟಿ.ಯು.) ನಾಲ್ಕನೇ ವಾರ್ಷಿಕ ಮಹಾಸಭೆಯು ದಿನಾಂಕ 2 ರಂದು ಕಾಂ॥ ಕ್ರಿಸ್ತಾನಂದ ತೇಜಪಾಲ ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿತು.

ಅಗಲಿದ ನಾಯಕರುಗಳಾದ ಕಾಂ॥ ವೆಂಕಟ್ರಾಮನ್ ಮತ್ತಿತರರಿಗೂ ಸಂಘದ ಸದಸ್ಯರಾಗಿದ್ದು ನಿಧನ ಹೊಂದಿದ ವಿನ್‌ಫ್ರೀಡ್ ಕರ್ಕಡ ಮತ್ತಿತರರಿಗೆ ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಜತೆ ಕಾರ್ಯದರ್ಶಿ ಕೆ. ಸಂಜೀವ ಸೆಟ್ಟಿಗಾರರು ವಾರ್ಷಿಕ ವರದಿ ಲೆಖ್ಖಪತ್ರವನ್ನು ಸಭೆಯ ಮುಂದಿಟ್ಟರು. ವರದಿಯ ಮೇಲೆ ಕಾಮ್ರೇಡರುಗಳಾದ ಗಾಬ್ರಿಯೇಲ್ ಅಮ್ಮನ್ನ. ಇಮಾನುವೇಲ್ ಕರ್ಕಡ, ಲಾಜರ್ ಅಮ್ಮನ್ನ ಸೂಕ್ತ ಸಲಹೆಗಳನ್ನು ನೀಡಿದರು.

ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ಕಾಂ॥ ಕ್ರಿಸ್ತಾನಂದ ತೇಜಪಾಲ ಸೋನ್ಸ್, ಉಪಾಧ್ಯಕ್ಷರಾಗಿ ಡೇವಿಡ್ ಕರ್ಕಡ, ಕಾರ್ಯದರ್ಶಿಯಾಗಿ ಫೆಡ್ರಿಕ್ ಆಲ್ಬರ್ಟ್ ಸೋನ್ಸ್, ಜತೆ ಕಾರ್ಯದರ್ಶಿಯಾಗಿ ಕೆ. ಸಂಜೀವ ಸೆಟ್ಟಿಗಾರ, ಕೋಶಾಧಿಕಾರಿಯಾಗಿ ಲಾಜರ್ ಅಮ್ಮನ್ನ. ಸದಸ್ಯರುಗಳಾಗಿ ಸಂಜೀವ ಹರಿಜನ, ಬೆನ್ನನ್ ಬಂಗೇರ, ಜಯಕರ ಜತ್ರನ್ನ, ರೊನಾಲ್ಡ್ ಸೋನ್ಸ್ ವಿನ್‌ಫ್ರೇಟ್ ಅಂಚೆನ್ನಿರು ಇರುವ ಸಮಿತಿಯನ್ನು ಆರಿಸಲಾಯಿತು.

ಕನಿಷ್ಟ ಕೂಲಿ ಸಲಹಾ ಸಮಿತಿ ರಚನೆ

ಕರ್ನಾಟಕ ಸರಕಾರ ಕನಿಷ್ಟ ಕೂಲಿ ಸಲಹಾ ಸಮಿತಿಯನ್ನು ಪುನರ್ರಚಿಸಿದೆ. ಇದರಲ್ಲಿ ಏಳು ಜನ ಮಾಲೀಕರ ಪ್ರತಿನಿಧಿಗಳು, ಏಳು ಜನ ಕಾರ್ಮಿಕರ ಪ್ರತಿನಿಧಿಗಳು ಮತ್ತು ಏಳು ಜನ ಶಾಸಕರು, ಪ್ರಾಧ್ಯಾಪಕರು, ನಿವೃತ್ತ ಅಧಿಕಾರಿಗಳು ಇದ್ದಾರೆ. ಇದರಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ (ಶ್ರೀ ರುದ್ರಪ್ಪನವರು) ಮಾಲೀಕರ ಪ್ರತಿನಿಧಿಯಾಗಿ ಮತ್ತು ಕಾರ್ಮಿಕರ ಪ್ರತಿನಿಧಿಯಾಗಿ ಕರ್ನಾಟಕ ಪ್ರಾಂತ್ಯ ರೈತ ಸಂಘದ ಅಧ್ಯಕ್ಷರನ್ನು ಮತ್ತು ರಾಜ್ಯ ಸಿಟು ಅಧ್ಯಕ್ಷರನ್ನು ನೇಮಿಸಲಾಗಿದೆ. ಕರ್ನಾಟಕ ರಾಜ್ಯ ರೈತ ಸಂಘ (ಶಿವಮೊಗ್ಗ) ಇದರ ಅಧ್ಯಕ್ಷರನ್ನು ಮಾಲೀಕರ ಪ್ರತಿನಿಧಿಯಾಗಿ ಗುರುತಿಸಲಾಗಿದೆಯೆಂಬುದು ಗಮನಾರ್ಹ.

ಮಾಲೀಕರ ಪ್ರತಿನಿಧಿಗಳಾಗಿ ಇಂಜಿನಿಯರಿಂಗ್ ಕಾರ್ಖಾನೆಗಳ, ಪ್ಲಾಂಟರುಗಳ, ಅಗರಬತ್ತಿ ತಯಾರಿಕರ, ಬೀಡಿ ತಯಾರಕರ, ಹೋಟೆಲು ಮಾಲೀಕರ ಸಂಘಗಳ ಅಧ್ಯಕರುಗಳೂ ಇದ್ದಾರೆ.

ಕಾರ್ಮಿಕರ ಪ್ರತಿನಿಧಿಗಳಾಗಿ ಇಂಟಕ್, ಐಟಕ್, ಬಿ.ಎಂ.ಎಸ್., ಎಚ್.ಎಂ.ಎಸ್. ಮತ್ತು ಬೀಡಿ ಮಜದೂರ ಒಕ್ಕೂಟದ ಅಧ್ಯಕ್ಷರುಗಳಿದ್ದಾರೆ.

ಸಂವಿಧಾನದ 356ನೇ ವಿಧಿ ರದ್ದಾಗಬೇಕು

—ಇ. ಎಂ. ಎಸ್.

ಕೇಂದ್ರ–ರಾಜ್ಯ ಸಂಬಂಧಗಳ ಬಗ್ಗೆ ವಿಚಾರಣೆ ನಡೆಸಲು ನೇಮಕಗೊಂಡ ಸರ್ಕಾರಿಯಾ ಆಯೋಗ ಎಲ್ಲಾ ಪ್ರಸ್ತುತ ಹಾಗೂ ಮಾಜೀ ಮುಖ್ಯ ಮಂತ್ರಿಗಳಿಗೆ ತಮ್ಮ ಅನುಭವ–ಅಭಿಪ್ರಾಯ ತಿಳಿಸಲು ಕೋರಿಕೊಂಡಿತ್ತು. ಕಾ॥ ಇ. ಎಂ. ಎಸ್. ನಂಬೂದಿರಿಪಾದರು ಕೋರಿಕೆಗೆ ಬರೆದ ಉತ್ತರದ ಒಕ್ಕಣೆ ಹೀಗಿದೆ.

"ನಾನು ಈ ಪತ್ರವನ್ನು ಕೇಂದ್ರ ರಾಜ್ಯ ಸಂಬಂಧಗಳ ಪ್ರಶ್ನೆಗೆ ಸಂಬಂಧಪಟ್ಟಂತೆ ಮುಖ್ಯ ಮಂತ್ರಿಯಾಗಿ ನನ್ನ ಅನುಭವಗಳಿಗಷ್ಟೇ ಸೀಮಿತಗೊಳಿಸುತ್ತಿದ್ದೇನೆ. ಈ ಪ್ರಶ್ನೆಯ ವಿವಿಧ ಅಂಶಗಳ ಕುರಿತು ನನ್ನ ಪಕ್ಷದ ಅಭಿಪ್ರಾಯಗಳನ್ನು ನಿಮಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

1957ರಲ್ಲಿ ಕೇರಳದಲ್ಲಿ 65 ವಿಧಾನ ಸಭಾ ಸದಸ್ಯರ ಸಭೆಯಲ್ಲಿ ಕಮ್ಯುನಿಸ್ಟ್ ವಿಧಾನ ಮಂಡಲ ಪಕ್ಷದ ನಾಯಕನಾಗಿ ವಿಧಿವತ್ತಾಗಿ ಚುನಾಯಿತನಾದ ಮೇಲೆ ನಾನು ಸರಕಾರ ರಚಿಸುವ ನನ್ನ ದಾವೆಯನ್ನು ಮಂಡಿಸಿದೆ. ಆದರೆ ಆಗಿನ ರಾಜ್ಯಪಾಲರು ಅದನ್ನು ಮನ್ನಿಸಲು ತಯಾರಾಗಲಿಲ್ಲ. ನನ್ನನ್ನು ನಾಯಕನಾಗಿ ಚುನಾಯಿಸಿದ ಸಭೆಯಲ್ಲಿ ಹಾಜರಿದ್ದ ಐವರು ಪಕ್ಷೇತರ ಎಂ.ಎಲ್.ಎ. ಗಳನ್ನು ಅವರು ಪ್ರತ್ಯೇಕವಾಗಿ ಸಂದರ್ಶಿಸಿದರು. ಆಗ ಈ ಐವರು ಎಂ.ಎಲ್.ಎ. ಗಳ ಬೆಂಬಲ ಪಕ್ಷದ ಚಿಹ್ನೆಯ ಮೇಲೆ ಗೆದ್ದು ಬಂದ ಎಂ.ಎಲ್.ಎ. ಗಳಷ್ಟೇ ದೃಢವಾಗಿತ್ತು ಎಂದು ಕಂಡುಕೊಂಡ ಮೇಲಷ್ಟೇ ರಾಜ್ಯಪಾಲರು ನನ್ನ ದಾವೆಯನ್ನು ಸ್ವೀಕರಿಸಿ ನನ್ನನ್ನು ಸರಕಾರ ರಚಿಸಲು ಆಹ್ವಾನಿಸಿದರು.

ಹೀಗೆ ಆಹ್ವಾನಿಸಿಧ ಮೇಲೂ ರಾಜ್ಯಪಾಲರು ಸಂವಿಧಾನದ ಪ್ರಕಾರ ಆ್ಯಂಗ್ಲೋ ಇಂಡಿಯನ್ ಸ್ಥಾನಕ್ಕೆ ನಾಮಕರಣ ಮಾಡುವ ವಿಷಯದಲ್ಲಿ ವಿಶೇಷ ಕ್ರಮ ಅನುಸರಿಸಿದರು. ಒಮ್ಮೆ ಚುನಾವಣೆಗಳು ನಡೆದು, ಮಂತ್ರಿ ಮಂಡಳ ರಚನೆಯಾಗಲಿದೆ – ಯೆಂದ ಮೇಲೆ ರಾಜ್ಯಪಾಲರಿಗೆ ವಿಧಾನ ಮಂಡಲಕ್ಕೆ ಸಂಬಂಧಪಟ್ಟಂತೆ ಯಾವ ಪಾತ್ರವೂ ಇಲ್ಲ. ನಾಮಕರಣವನ್ನು ಮಂತ್ರಿಮಂಡಳ ಪ್ರತಿಜ್ಞೆ ಸ್ವೀಕರಿಸಿದ ಮೇಲೆ ಅವರ ಸಲಹೆಯ ಮೇರೆಗೆ ಮಾತ್ರ ನಡೆಸಬೇಕು ಎಂಬ ಕಾರಣದಿಂದ ನಾನು ರಾಜ್ಯಪಾಲರ ಈ ಕ್ರಮಕ್ಕೆ ಆಕ್ಷೇಪ ಎತ್ತಿದೆ. ಆದಾಗ್ಯೂ ರಾಜ್ಯಪಾಲರು ಆ ಸ್ಥಾನಕ್ಕೆ ನಾಮಕರಣ ಮಾಡಿದರು. ಹೀಗೆ ನಾಮಕರಣಗೊಂಡವರು ಒಬ್ಬ ಕಾಂಗ್ರೆಸ್ಸಿಗರು

ಹುದ್ದೆಯ ದುರುಪಯೋಗ

ಆ ಚುನಾವಣೆಗಳಲ್ಲಿ, ನಮ್ಮ ಬೆಂಬಲದಿಂದ ಗೆದ್ದು ಬಂದ ಐವರು ಪಕ್ಷೇತರರು ಸೇರಿದಂತೆ ನಮಗೆ 65 ಸ್ಥಾನಗಳು ದೊರೆತಿದ್ದರೆ, ಉಳಿದೆಲ್ಲ ಪಕ್ಷಗಳು ಒಟ್ಟಾಗಿ ಗೆದ್ದ ಸೀಟುಗಳ ಸಂಖ್ಯೆ 61. ರಾಜ್ಯಪಾಲರ ಈ ನಾಮಕರಣದಿಂದ ಅದು 62 ಕ್ಕೇರಿತು. ರಾಜ್ಯಪಾಲರು ಈ ರೀತಿ ತನ್ನ ಅಧಿಕಾರವನ್ನು ಚುನಾವಣೆಯಲ್ಲಿ ಸೋತ ಪಕ್ಷದ ಹಿತಾಸಕ್ತಿಗಳಿಗನುಗುಣವಾಗಿ ಬಳಸಿಕೊಂಡರು. ಐವರು ಪಕ್ಷೇತರ ಎಂ.ಎಲ್.ಎ. ಗಳನ್ನು ವೈಯಕ್ತಿಕವಾಗಿ ಸಂದರ್ಶಿಸುವ ಅವರ ಕ್ರಮ ಉದ್ದೇಶವು ಕಮ್ಯುನಿಸ್ಟ್ ವಿಧಾನ ಮಂಡಲ ಪಕ್ಷದಲ್ಲಿ ಒಡಕು ತರುವುದೇ ಆಗಿತ್ತು. ಅದು ವಿಫಲಗೊಂಡಿತು ಎಂಬುದು ಬೇರೆ ಮಾತು. ಅಧಿಕಾರದ ಹುದ್ದೆ ಸಿಗಲು ಕಾರಣವಾದ ಪಕ್ಷಕ್ಕೆ ಪ್ರಯೋಜನವಾಗುವಂತೆ ರಾಜ್ಯಪಾಲರ ಹುದ್ದೆಯನ್ನು ಬಳಸಿಕೊಳ್ಳಲಾಯಿತು ಎಂಬುದಂತೂ ವಾಸ್ತವ ಸಂಗತಿ.

ಇದು ಕೇಳರದಲ್ಲಿ ನಡೆದದ್ದು ಆ ರಾಜ್ಯ ಒಂಧು ಅಪವಾದವಾಗಿದ್ದ ಸಮಯದಲ್ಲಿ. ಆಗ ಕೇಂದ್ರದಲ್ಲಿ ಹಾಗೂ ಕೇರಳ ಬಿಟ್ಟು ಉಳಿದೆಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್ ಬಹುಮತದಲ್ಲಿತ್ತು. ಆದರೆ ಈಗ ಕೇಂದ್ರದಲ್ಲಿ ಹಾಗೂ ಎಲ್ಲ ರಾಜ್ಯಗಳಲ್ಲಿ ಒಂದೇ ಪಕ್ಷ ಬಹುಮತ ಪಡೆಯುವ ಸ್ಥಿತಿಯಲ್ಲಿಲ್ಲ. ಕೇಂದ್ರದಲ್ಲಿ ಆಳುವ ಪಕ್ಷ ಹಲವು ರಾಜ್ಯಗಳಲ್ಲಿ ವಿರೋಧ ಪಕ್ಷವಾಗಿ ಕೂತಿರಬೇಕಾಗಿರುವುದು ಸದ್ಯದ ವಾಸ್ತವ ಸ್ಥಿತಿ ಇದು ಮುಂದಿನ ಚುನಾವಣೆಗಳ ನಂತರವೂ ಮುಂದುವರಿಯಲಿದೆ. ಇಂತಹ ಸನ್ನಿವೇಶದಲ್ಲಿ ಕೇಂದ್ರದ ಆಳುವ ಪಕ್ಷಕ್ಕೆ ವಿಧೇಯನಾಗಿರುವ ವ್ಯಕ್ತಿಯೇ ರಾಜ್ಯಪಾಲರ ಹುದ್ದೆಗೆ ಬರುವುದರಿಂದಾಗಿ, ಸೋತ ಪಕ್ಷವನ್ನು ಆಳುವ ಪಕ್ಷವನ್ನಾಗಿ ಪರಿವರ್ತಿಸಲು ಈ ಹುದ್ದೆಯನ್ನು ಉಪಯೋಗಿಸಲು ಸಾಧ್ಯವಿದೆ. ಈಗ ಕೇಂದ್ರಕ್ಕೆ ರಾಜ್ಯಪಾಲರುಗಳ ವಿಧೇಯತೆಯಿಂದಾಗಿಯಷ್ಟೇ ತಮ್ಮ ಹುದ್ದೆ ಪಡೆದ ಹಲವು ಮುಖ್ಯಮಂತ್ರಿಗಳನ್ನು ಕಾಣಬಹುದು ಎಂಬ ವಾಸ್ತವ ಸ್ಥಿತಿ ಇದಕ್ಕೆ ಉದಾಹರಣೆ.

ಸಂವಿಧಾನಿಕ ಪ್ರಶ್ನೆ

ಕೇಂದ್ರ–ರಾಜ್ಯ ಸಂಬಂಧಗಳ ಇತರ ಅಂಶಗಳ ಬಗ್ಗೆ ಹೇಳುವ ಮೊದಲು 1965 ರಲ್ಲಿ ಕೇರಳದ ಮಧ್ಯಾವಧಿ ಚುನಾವಣೆಯ ಬಗ್ಗೆ ನನ್ನ ಅನುಭವವನ್ನು ತಿಳಿಸ ಬಯಸುತ್ತೇನೆ. ಆ ಚುನಾವಣೆಯಲ್ಲಿ ವಿಧಾನಮಂಡಲದಲ್ಲಿ ಯಾವುದೇ ಒಂದು ಪಕ್ಷ ಬಹುಮತ ಗಳಿಸಲಾಗಲಿಲ್ಲ. ಆದರೆ ನನ್ನ ಪಕ್ಷ ಅತ್ಯಂತ ಹೆಚ್ಚು ಸೀಟು ಪಡೆದ ಪಕ್ಷವಾಗಿತ್ತು. ಬೇರೆ ಕೆಲವು ವಿರೋಧಪಕ್ಷಗಳ ಬೆಂಬಲದ ಸಾಧ್ಯತೆಯಿದ್ದುದರಿಂದ ನಾನು ರಾಜ್ಯಪಾಲರ ಬಳಿ ಸರಕಾರ ರಚಿಸುವ ನನ್ನ ದಾವೆಯನ್ನು ಮಂಡಿಸಿದೆ. ಆದರೆ ಇದಕ್ಕೆ ಭಾರತ ರಕ್ಷಣಾ ಕಾನೂನಿನ ಪ್ರಕಾರ ವಿಚಾರಣೆಯಿಲ್ಲದೆ ಬಂಧನದಲ್ಲಿದ್ದ ನನ್ನ ಪಕ್ಷದ 29 ಎಂ. ಎಲ್. ಎ. ಗಳ ಬಿಡುಗಡೆಯಾಗಬೇಕಿತ್ತು. ರಾಜ್ಯಪಾಲರು ಇದಕ್ಕೆ ನಿರಾಕರಿಸಿ ಯಾವುದೇ ಪಕ್ಷ ಸರಕಾರ ರಚಿಸಲು ಸಾಧ್ಯವಿಲ್ಲ ಎಂಬ ನೆವದ ಮೇಲೆ ವಿಧಾನಸಭೆಯನ್ನು ವಿಸರ್ಜಿಸಿದರು.

ಇಲ್ಲಿ ಒಂದು ವಿಷಯನ್ನು ತಿಳಿಸಬಹುದು. ಅದೇನೆಂದರೆ ನನ್ನ ಸಂಗಾತಿಗಳು ಹಾಗೂ ಸಹಯೋಗಿಗಳು ಯಾವ ಕಾರಣದಿಂದ ಆಗ ಬಂಧನದಲ್ಲಿದ್ದರೋ ಅದು ಸಂಪೂರ್ಣವಾಗಿ ತಪ್ಪು ಎಂದು ಚರಿತ್ರೆ ಸಾಧಿಸಿತೋರಿಸಿದೆ. ಅವರ ಏಕಮಾತ್ರ 'ಅಪರಾಧ'ವೆಂದರೆ ಚೀಣಾದೊಂದಿಗೆ ಭಾರತದ ವಿವಾದವನ್ನು ಮಾತುಕತೆಗಳ ಮೂಲಕ ಬಗೆಹರಿಸಲು ಪ್ರಯತ್ನಿಸಬೇಕೆಂದು ನಮ್ಮ ಪಕ್ಷ ಒತ್ತಾಯಿಸಿದ್ದಷ್ಟೇ. ಈ ಸಲಹೆಯನ್ನು ನಂತರ ಭಾರತ ಸರಕಾರವೂ ಸ್ವೀಕರಿಸಬೇಕಾಗಿ ಬಂತು. ಆದರೆ ಮೊದಲೇ ನಮ್ಮ ಪಕ್ಷವನ್ನು ಅತೀದೊಡ್ಡ ಪಕ್ಷವಾಗಿ ಚುನಾಯಿಸಿ ಕೇರಳದ ಮತದಾರರು ಭಾಆತ ಸರಕಾರಧ ನಿಲುವನ್ನು ತಿರಸ್ಕರಿಸಿದ್ದರು.

ನಾನು ಈ ವಿಷಯದಲ್ಲಿ ಅಡಕವಾಗಿರುವ ರಾಜಕೀಯ ಪ್ರಶ್ನೆಯನ್ನು, ನಮ್ಮ ಪಕ್ಷದ ರಾಜಕೀಯ ನಿಲುವು ಸರಿಯೋ, ಅಲ್ಲವೋ ಎಂಬ ಪ್ರಶ್ನೆಯನ್ನು ಇಲ್ಲಿ ಎತ್ತುತ್ತಿಲ್ಲ. ಆದರೆ ಕೇಂದ್ರದ ಗೃಹ ಖಾತೆ ಮತ್ತು ಆ ಖಾತೆಯ ನಿರ್ದೇಶನಗಳಿಗನುಸಾರವಾಗಿ ವರ್ತಿಸುವ ರಾಜ್ಯಪಾಲರು ಜನತೆ ಅತೀದೊಡ್ಡ ಪಕ್ಷವೆಂದು ಚುನಾಯಿಸಿದ ಪಕ್ಷದ ಎಂ.ಎಲ್.ಎ.ಗಳನ್ನು ಬಂಧನದಲ್ಲಿಟ್ಟು ಆ ಪಕ್ಷ ಸರಕಾರ ರಚಿಸದಂತೆ ತಡೆಯುವುದು ಸರಿಯೇ ಎಂಬ ಸಂವೈಧಾನಿಕ ಪ್ರಶ್ನೆಯನ್ನು ನಾನು ಎತ್ತುತ್ತಿದ್ದೇನೆ.

ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳ ಸಂಸದೀಯ ವ್ಯವಸ್ಥೆಯ ಪರಂಪರೆಯಲ್ಲಿ ಚುನಾಯಿತ ವಿಧಾನಮಂಡಲಗಳಿಗೆ, ನ್ಯಾಯಾಲಯ ಶಿಕ್ಷೆ ವಿಧಿಸಿದಾಗಲೂ ಕೂಡಾ, ಬಂಧನವಾಗದಂತೆ ರಕ್ಷಣೆಯಿದೆ. ಇದರಿಂದ ಕೇವಲ ಪಾರ್ಲಿಮೆಂಟ್ ಮಾತ್ರ ವಿನಾಯಿತಿ ಕೊಡಲು ಸಾಧ್ಯ. ಆದರೆ ಭಾರತದಲ್ಲಿ ಎಂ.ಪಿ. ಗಳಿಗೆ, ಎಂ.ಎಲ್.ಎ.ಗಳಿಗೆ ಇಂತಹ ರಕ್ಷಣೆ ಇಲ್ಲ, ಮಾತ್ರವಲ್ಲ ಅವರನ್ನು ನ್ಯಾಯಾಲಯದೆದುರು ಹಾಜರುಪಡಿಸದೆ ದೀರ್ಘಕಾಲ ಬಂಧನದಲ್ಲಿಡಲಾಗುತ್ತಿದೆ. ದೇಶದ ಇಂದಿನ ಅಸ್ಥಿರ ಸನ್ನಿವೇಶದಲ್ಲಿ ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳು ಸ್ಥಾನ ಬದಲಿಸಿಕೊಳ್ಳುವ ಸಂಭವವಿರುವಾಗ, ಕಾರ್ಯಾಂಗದ ಕೈಯಲ್ಲಿನ ಇಂತಹ ಸ್ವೇಚ್ಛಾಧಿಕಾರವನ್ನು ಕೇರಳದಲ್ಲಿ ನಮ್ಮ ಪಕ್ಷದ ವಿರುದ್ಧ ಬಳಸಿದ ರೀತಿಯಲ್ಲಿ ಉಪಯೋಗಿಸುವುದು ಖಂಡಿತ.

೩೫೬ನೇ ವಿಧಿಯಿಂದಾಗಿ

ಪತ್ರ ಮುಗಿಸುವ ಮೊದಲು, ಕೇರಳದಲ್ಲಿ ಎರಡು ಬಾರಿ ರಾಜ್ಯ-ಸರಕಾರಗಳ ಮುಖಂಡತ್ವ ವಹಿಸುವ ವಿಶೇಷ ಅವಕಾಶ ನಾನು ಪಡೆದಿದ್ದಾಗ ಕೇಂದ್ರ ಸರಕಾರ ಕೇರಳದ ವ್ಯವಹಾರಗಳಲ್ಲಿ ಪ್ರಜಾಪ್ರಭುತ್ವ-ವಿರೋಧೀ ವಿಧಾನದಲ್ಲಿ ಹಸ್ತಕ್ಷೇಪ ನಡೆಸಿದ ಬಗ್ಗೆ ಎರಡು ಉದಾಹರಣೆ ಕೊಡಬಯಸುತ್ತೇನೆ.

1. ನನ್ನ ಮೊದಲ ಅಧಿಕಾರಾವಧಿಯಲ್ಲಿ (1957-59) ಕೈಗೊಳ್ಳಲಾದ ಎರಡು ಮಸೂದೆಗಳ ಬಗ್ಗೆ ನಾನು ನ್ಯಾಯವಾಗಿಯೇ ಹೆಮ್ಮೆ ಪಟ್ಟುಕೊಳ್ಳುತ್ತೇನೆ. ಕೃಷಿ ಸಂಬಂಧಗಳು ಹಾಗೂ ಶಿಕ್ಷಣಕ್ಕೆ ಸಂಬಂಧಪಟ್ಟ ಮಸೂದೆಗಳು ಇವು. ಇವೆರಡು ಸ್ಥೂಲವಾಗಿ ಕೇಂದ್ರ ಸರಕಾರ ಹಾಗೂ ಕಾಂಗ್ರೆಸ್ ಪಕ್ಷದ ನೀತಿ – ನಿರ್ದೇಶನಗಳ ಪ್ರಕಾರವೇ ಇದ್ದವು. ವಾಸ್ತವತೆಯೇನೆಂದರೆ ತಮ್ಮ ನಾಯಕರು ಘೋಷಿಸಿದ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಕಮ್ಯುನಿಸ್ಟ್ ಪಕ್ಷ ರಚಿಸಿದ ಕಾಂಗ್ರೆಸ್ಸೇತರ ಸರಕಾರವೊಂದು ಬರಬೇಕಾಯಿತೆಂಬ ಬಗ್ಗೆ ಹಲವಾರು ಕಾಂಗ್ರೆಸ್ಸಿಗರು ಖಿನ್ನರಾಗಿದ್ದರು. ಸ್ವಾಭಾವಿಕವಾಗಿಯೇ ಈ ಮಸೂದೆಗಳನ್ನು ಪಟ್ಟಭದ್ರ ಹಿತಾಸಕ್ತಿಗಳ ಅಂದರೆ ಹಳೆಯ ಊಳಿಗ ಮಾನ್ಯ ಹಾಗೂ "ಆಧುನಿಕ"ರಾದ ಭೂಮಾಲಕರು. ಜತೆಗೆ ಲಾಭಗಳಿಕೆಗಾಗಿ ವ್ಯಾಪಾರದಂತೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದ ವ್ಯವಸ್ಥಾಪಕರುಗಳು ವಿರೋಧಿಸಿದರು. ಕೇಂದ್ರದ ಆಳುವ ಪಕ್ಷದ (ರಾಜ್ಯದಲ್ಲಿ ಅದು ವಿರೋಧ ಪಕ್ಷವಾಗಿತ್ತು) ನೇರ ನಾಯಕತ್ವದಲ್ಲೇ ಇವರೆಲ್ಲಾ ರಾಜ್ಯ ಸರಕಾರದ ವಿರುದ್ಧ ಏಕದಂ ಸಂವಿಧಾನ ಬಾಹಿರವಾದ ಚಳುವಳಿ ಸಂಘಟಿಸಿದರು.

ಇಲ್ಲೂ, ಪ್ರಶ್ನೆ ನನ್ನ ಸರಕಾರ ಅನುಸರಿಸಿದ ಧೋರಣೆ ಸರಿಯೋ, ಅಲ್ಲವೋ ಎಂಬುದಲ್ಲ. ಆ ಧೋರಣೆಯನ್ನು ಕೇಂದ್ರದ ಆಳುವ ಪಕ್ಷವೂ ಸೇರಿದಂತೆ ಯಾವುದೇ ಪಕ್ಷವೂ ವಿರೋಧಿಸಬಹುದು. ಆದರೆ ಕೇರಳದ "ವಿಮೋಚನಾ ಸಮರ"ದ ಸಂಘಟಿಕರು ಮಾಡಿದಂತೆ ಆಡಳಿತವನ್ನು "ಅಸ್ತವ್ಯಸ್ತ"ಗೊಳಿಸುವ ಘೋಷಿತ ಉದ್ದೇಶದಿಂದಲೇ ಆರಂಭವಾದ 'ವಿಮೋಚನಾ ಸಮರ'ಕ್ಕೆ ಕೇಂದ್ರದ ರಾಜಕೀಯ ಪಕ್ಷ ಒಪ್ಪಿಗೆಯ ಮುದ್ರೆಯೊತ್ತುವುದು ಸರಿಯಾಗಿತ್ತೇ? ಈ "ವಿಮೋಚನಾ ಸಮರ" ದಿಂದ ಉಂಟಾದ ಪರಿಸ್ಥಿತಿಯನ್ನೇ ನೆಪಮಾಡಿಕೊಂಡು ಕೇರಳ ಸರಕಾರವನ್ನು ವಿಸರ್ಜಿಸಿ ರಾಷ್ಟ್ರಪತಿ ಆಳ್ವಿಕೆಯನ್ನು ಕೇಂದ್ರ ಸರಕಾರ ಹೇರಿದ್ದು ಸಂವೈಧಾನಿಕವೇ ? 356ನೇ ವಿಧಿ ಸಂವಿಧಾನದಲ್ಲಿ ಮುಂದುವರಿದರೆ ಭವಿಷ್ಯದಲ್ಲೂ ಇದು ಪುನರಾವರ್ತನೆಗೊಳ್ಳಲಿಕ್ಕಿಲ್ಲವೇ ?

2. 1967-69ರಲ್ಲಿ ಮತ್ತೊಮ್ಮೆ ನಾನು ಕೇರಳ ಸರಕಾರದ ಮುಖಂಡತ್ವ ವಹಿಸಿದ್ದಾಗ ಸಂವೈಧಾನಿಕ ರೀತಿಯ ಒಂದು ಗಂಭೀರ ವಿವಾದವೆದ್ದಿತು. ಕೇಂದ್ರ ಸರಕಾರದ ನೌಕರರು ಒಂದು ದಿನದ ಮುಷ್ಕರ ನಡೆಸುವವರಿದ್ದರು. ಗೃಹಖಾತೆ ಈ ಬಗ್ಗೆ "ಬಿಗಿ" ನಿಲುವು ತಳೆಯಬೇಕೆಂದು ನಿರ್ಧರಿಸಿತು. ಮುಷ್ಕರಕ್ಕೆ "ಕುಮ್ಮಕ್ಕು" ನೀಡುವವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಬೇಕೆಂದು ಅದು ಎಲ್ಲಾ ರಾಜ್ಯ ಸರಕಾರಗಳಿಗೆ ನಿರ್ದೇಶನ ನೀಡಿತು. ನನ್ನ ಸರಕಾರ ಇದು ಸರಿಯೆಂದು ಪರಿಗಣಿಸಲಿಲ್ಲ ನಾವು ಯಾರನ್ನೂ ಬಂಧಿಸಲು ನಿರಾಕರಿಸಿದೆವು. ಮುಷ್ಕರದಿಂದಾಗಿ ಏರ್ಪಡುವ ಪರಿಸ್ಥಿತಿ ಎದುರಿಸಲು ಗೃಹಖಾತೆ "ನೀಡುವುದಾಗಿ" ಹೇಳಿದ ಕೇಂದ್ರ ವಿಾಸಲು ಪಡೆಯ ಸೇವೆಯನ್ನು ಉಪಯೋಗಿಸಲು ಕೂಡಾ ನಾವು ನಿರಾಕರಿಸಿದೆವು.

ರಾಜ್ಯದ ಅಧಿಕಾರ ವ್ಯಾಪ್ತಿ

ನಾವು ಈ ನಿಲುವು ಅಂಗೀಕರಿಸಲು ಕಾರಣ ಕೇಂದ್ರ ಸರಕಾರದ "ಬಿಗಿ" ನಿಲುವನ್ನು ನಾವು ಒಪ್ಪದಿದ್ದುದು ಮಾತ್ರವಲ್ಲ, ವಿಚಾರಣೆಯಿಲ್ಲದೆ ಬಂಧನ ಅಥವಾ ಸಿ.ಆರ್.ಪಿ. ಉಪಯೋಗಿಸದೆ ರಾಜ್ಯದಲ್ಲಿ ಕಾನೂನು ಮತ್ತು ವ್ಯವಸ್ಥೆ ರಕ್ಷಿಸುವ ಬಗ್ಗೆ ನಮಗೆ ಭರವಸೆಯಿತ್ತು. ಅದಕ್ಕೆ ಕೇಂದ್ರ ಸರಕಾರದ ನಿರ್ದೇಶನವನ್ನು ಪಾಲಿಸದಿದ್ದುದಕ್ಕೆ ಸಂಬಂಧಪಟ್ಟಂತೆ ಇರುವ ಸಂವಿಧಾನದ ವಿಧಿಯನ್ನು ಉಪಯೋಗಿಸಬಹುದೆಂದು ಎಚ್ಚರಿಸಿ ಆಗಿನ ಗೃಹಮಂತ್ರಿ ವೈ. ಬಿ. ಚವ್ಹಾಣರು ನನಗೆ ಒಂದು ತಂತಿ ಕಳುಸಿದರು. ನಾನು ದೃಢವಾಗಿ ನಿಂತೆ. ಹಾಗೂ ರಾಜ್ಯ ಮತ್ತು ಕೇಂದ್ರದ ನಡುವಿನ ವಿವಾದವನ್ನು ಬಗೆಹರಿಸಲು ಸಂವಿಧಾನದಲ್ಲಿ ಕಲ್ಪಿಸಿರುವಂತೆ ಒಂದು ಅಂತರ-ರಾಜ್ಯ ಪರಿಷತ್ತನ್ನು ರಚಿಸಬೇಕೆಂದು ಒತ್ತಾಯಿಸಿದೆ.

ನನ್ನ ಈ ಒತ್ತಾಯವನ್ನು ನಿರಾಕರಿಸಿದರೂ, ಕೇಂದ್ರ ಈ ಬಗ್ಗೆ ನಂತರ ಮುಂದುವರೆಯಲಿಲ್ಲ. ಆದ್ದರಿಂದ ಕೇಂದ್ರದೊಡನೆ ನಮ್ಮ ಸಂಬಂಧದಲ್ಲಿ ಬಿಕ್ಕಟ್ಟೇನೂ ಉಂಟಾಗಲಿಲ್ಲ. ಆದರೆ ಆಗ ಎದ್ದ ಪ್ರಶ್ನೆ ಈಗಲೂ ಹಾಗೇ ಇದೆ–ಅರ್ಥಾತ್ ರಾಜ್ಯಪಟ್ಟಿಗೆ ಸೇರಿದ ಒಂದು ವಿಷಯದ ಮೇಲೆ ಕೇಂದ್ರ ಒಂದು ರಾಜ್ಯದ ಬಗ್ಗೆ ಈ ರೀತಿಯ ನಿಲುವು ತಳೆಯುವುದು ಸರಿಯೇ ಎಂಬುದೇ ಆ ಪ್ರಶ್ನೆ. ಕಾನೂನು

(6ನೇ ಪುಟ ನೋಡಿ)

ಕರ್ನಾಟಕದ ಹೊಸ ಪರಿಸ್ಥಿತಿಯಲ್ಲಿ

(ಫೆಬ್ರವರಿ, 1983ರಲ್ಲಿ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಪಕ್ಷದ ಕಾರ್ಯಕರ್ತರಿಗೆ ಕಾ॥ ಇ. ಎಂ. ಎಸ್. ನಡೆಸಿದ ಪಾಠದ ಸಂಗ್ರಹಾನುವಾದ, ಕಾ॥ ಆರ್. ಚಂದ್ರ ಅವರಿಂದ)

ಹೊಸ ಅವಕಾಶ ಹೊಸ ಹೊಣೆಗಾರಿಕೆ

ಕರ್ನಾಟಕ ರಾಜ್ಯದಲ್ಲಿ ಹೊಸ ಪರಿಸ್ಥಿತಿ ಉಂಟಾಗಿದೆ. ಜನವರಿ, 1983ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಶಕ್ತಿಯನ್ನು ಪ್ರತಿನಿಧಿಸುವ ಇಂದಿರಾ ಕಾಂಗ್ರೆಸ್‌ನ್ನು ಸೋಲಿಸಿದ ರಾಜಕೀಯ ಮೈತ್ರಿಕೂಟದಲ್ಲಿ ನಮ್ಮ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಒಂದಾಗಿದೆ. ಈ ಸಲ ಮೂರು ವಿಧಾನ ಸಭಾ ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಗೆದ್ದು ಬಂದಿರುವುದು ನಮಗೆಲ್ಲರಿಗೂ ಒಂದು ಸದಾವಕಾಶವೂ ಆಗಿದೆ ಮತ್ತು ಹೊಣೆಗಾರಿಕೆಯೂ ಆಗಿದೆ. ಈ ಹೊಸ ಪರಿಸ್ಥಿತಿಯಲ್ಲಿ ನಾವು ಹೇಗೆ ನಡೆದುಕೊಳ್ಳಬೇಕು ಎಂಬ ಕುರಿತು ಪಕ್ಷದ ರಾಜ್ಯ ಸಮಿತಿಯಲ್ಲಿ ಕೂಲಂಕುಶವಾಗಿ ಚರ್ಚೆ ನಡೆಯಬೇಕು. ಸದ್ಯ ನನ್ನ ಕೆಲವು ಅಭಿಪ್ರಾಯಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

ನಮ್ಮ ಪಕ್ಷದ ನಿಲುವು ಏನು ಎಂದು ನಮಗೆ ಸ್ಪಷ್ಟವಾಗಿ ತಿಳಿದಿರಬೇಕು. ರಾಜ್ಯದ ಜನತಾ ಸರಕಾರದೊಡನಿರುವ ನಮ್ಮ ಸಂಬಂಧ ಹಿಂದಿನ ಇಂದಿರಾ ಕಾಂಗ್ರೆಸ್‌ನ ಗುಂಡೂರಾವ್ ಸರಕಾರದೊಂದಿಗಿದ್ದ ಸಂಬಂಧಕ್ಕಿಂತ ಬೇರೆಯಾಗಿದೆ. ಆದರೆ, ನಾವು ಹೊಸ ಸರಕಾರದೊಂದಿಗೆ ಸಂಪೂರ್ಣವಾಗಿ ನಮ್ಮನ್ನು ಗುರುತಿಸಿಕೊಳ್ಳುವುದಿಲ್ಲ. ನಾವು ಜನತಾ ಸರಕಾರವನ್ನು ಬೆಂಬಲಿಸುವುದು, ಬಲಗೊಳಿಸುವುದು, ರಕ್ಷಿಸುವುದು ಸರ್ವಾಧಿಕಾರಿ ಶಕ್ತಿಗಳ ವಿರುದ್ಧವಾಗಿದೆ ಮತ್ತು ಇಂದಿರಾ ಕಾಂಗ್ರೆಸ್‌ನ ಕೇಂದ್ರ ಸರಕಾರದಿಂದ ಹೊಸ ಸರಕಾರಕ್ಕೆ ಬರಬಹುದಾದ ಆಕ್ರಮಣಗಳ ವಿರುದ್ಧವಾಗಿದೆ.

ಜನತಾ ಸರಕಾರಕ್ಕೆ ತನ್ನದೇ ಆದ ಧೋರಣೆಗಳಿವೆ, ಕಾರ್ಯಕ್ರಮಗಳಿವೆ. ಜನತಾ ಪಕ್ಷದ ಕುರಿತು ನಮಗೆ ಹಲವಾರು ವಿಷಯಗಳಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ ಅಸ್ಸಾಂ ಚಳುವಳಿಯನ್ನು ಜನತಾ ಪಕ್ಷ ಬೆಂಬಲಿಸುತ್ತಿದೆ. ಅಲ್ಲಿ ನಡೆದ ವಿಧಾನ ಸಭಾ ಚುನಾವಣೆಯನ್ನು ಬಹಿಷ್ಕರಿಸಿದೆ. ಆದರೆ, ನಮ್ಮ ಪಕ್ಷ ಅಸ್ಸಾಂ ಚಳುವಳಿಯನ್ನು ವಿರೋಧಿಸುತ್ತಿದೆ, ಅಲ್ಲಿನ ಚುನಾವಣೆಯನ್ನು ಸ್ವಾಗತಿಸಿದೆ ಮತ್ತು ಅದರಲ್ಲಿ ಭಾಗವಹಿಸಿದೆ. ಆರ್ಥಿಕ ಧೋರಣೆಯಲ್ಲಿಯೂ, ವಿದೇಶಾಂಗ ನೀತಿಯಲ್ಲಿಯೂ ಉಭಯ ಪಕ್ಷಗಳಲ್ಲಿ ಮೂಲಭೂತವಾದ ಭಿನ್ನಾಭಿಪ್ರಾಯಗಳಿವೆ.

ಹಿಂದಿನ ಜನತಾ ಪಕ್ಷದ ಮುರಾರ್ಜಿ ದೇಸಾಯಿಯವರ ಕೇಂದ್ರ ಸರಕಾರದೊಂದಿಗಿದ್ದಂತೆಯೇ, ಇಂದಿನ ಜನತಾ ಪಕ್ಷದ ರಾಜ್ಯ ಸರಕಾರದ ಕುರಿತೂ ನಮ್ಮದು ದ್ವಿಮುಖ ಧೋರಣೆ, ರಾಜ್ಯದಲ್ಲಿ ಸರ್ವಾಧಿಕಾರಿ ಶಕ್ತಿಗಳ ವಿರೋಧಿಯಾಗಿ ಜನತಾ ಸರಕಾರವಿರುವುದರಿಂದ ಜನರ ಮಧ್ಯೆ ನಾವು ಬೆಳೆದು ಪ್ರಬಲರಾಗಲು ಇದೊಂದು ಸದವಕಾಶವಾಗಬಹುದು. ಆದರೆ, ಈ ಸಂದರ್ಭದಲ್ಲಿ ನಾವು ಎರಡು ಅಪಾಯಗಳನ್ನೆದುರಿಸಬೇಕಾಗಬಹುದು. ಒಂದು, ಜನತಾ ಸರಕಾರವನ್ನು ನಮ್ಮ ಸರಕಾರವೆಂದೇ ತಿಳಿಯುವುದು ಮತ್ತು ಅದರೊಂದಿಗೇ ನಾವು ಸಂಪೂರ್ಣವಾಗಿ ಐಕ್ಯಗೊಳ್ಳುವುದು. ಎರಡು : ಜನತಾ ಸರಕಾರವೂ ಬಂಡವಾಳಶಾಹಿ ಸರಕಾರವೆಂದೂ, ಇಂದಿರಾ ಕಾಂಗ್ರೆಸ್ ಸರಕಾರವನ್ನು ವಿರೋಧಿಸಿದಂತೆಯೇ ಈ ಸರಕಾರವನ್ನೂ ವಿರೋಧಿಸುವುದು. ಎರಡೂ ಅಪಾಯಗಳ ವಿರುದ್ಧ ನಾವು ಹೋರಾಡಬೇಕು.

ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನ, ಮಹಿಳಾ ಮತ್ತಿತರ ಸಾಮೂಹಿಕ ಸಂಘಟನೆಗಳ ಮೂಲಕ ನಡೆಯುವ ಜನತಾ ಆಂದೋಳನದಲ್ಲಿ ನಮ್ಮ ನಾಯಕತ್ವ, ಕ್ರಿಯಾಶೀಲತೆ, ಇವೇ ನಮ್ಮ ಸತ್ವಪರೀಕ್ಷೆಗಳು. ರಾಜ್ಯದ ಜನರ ಭಾಷೆ, ವಿಾಸಲಾತಿ, ಆರ್ಥಿಕ ಅಭಿವೃದ್ಧಿ, ಇತ್ಯಾದಿ ಸಮಸ್ಯೆಗಳ ಕುರಿತು ನಮ್ಮ ಪಕ್ಷದ ನಿಲುವು ಏನು ಎಂಬುದು ಪ್ರತಿ ಹಂತದಲ್ಲೂ ಬಹಳ ಪ್ರಾಮುಖ್ಯವಾಗುವುದು. ನಾವು ಹೀಗೆ ಕಾರ್ಯ ನಿರತರಾಗಿರುವಾಗ ಇದುತನಕ ನಮ್ಮ ಪಕ್ಷ, ಸಾಮೂಹಿಕ ಸಂಘಟನೆಗಳು ಮತ್ತು ಒಂದು ವಾರ ಪತ್ರಿಕೆ (ಐಕ್ಯರಂಗ) ನಮ್ಮ ಒಟ್ಟು ಶಕ್ತಿಯಾಗಿದ್ದವು. ಹೊಸ ಪರಿಸ್ಥಿತಿಯಲ್ಲಿ ರಾಜ್ಯ ವಿಧಾನ ಸಭೆಯಲ್ಲಿ ನಮ್ಮ ಪಕ್ಷದ ಮೂವರು ಪ್ರತಿನಿಧಿಗಳಿದ್ದಾರೆ. ಮುಂಬರುವ ನಗರಸಭೆಗಳ ಮತ್ತಿತರ ಸ್ಥಳೀಯ ಆಡಳಿತಗಳ ಹಾಗೂ ಸಹಕಾರ ಸಂಘಗಳ ಚುನಾವಣೆಗಳಲ್ಲಿಯೂ ನಮ್ಮ ಪಕ್ಷದ ಪ್ರತಿನಿಧಿಗಳು ಆರಿಸಲ್ಪಡಬಹುದು. ರಾಜ್ಯ ಸರಕಾರದ, ಸ್ಥಳೀಯ ಆಡಳಿತಗಳ, ಭೂನ್ಯಾಯ ಮಂಡಳಿಗಳ ಸಹಕಾರಿ ಸಂಘಗಳ ಅಧಿಕೃತ ಸಮಿತಿಗಳಲ್ಲಿ ನಮ್ಮ ಪಕ್ಷದ ಚುನಾಯಿತ ಅಥವಾ ನೇಮಕಾತಿಯ ಪ್ರಾತಿನಿಧ್ಯ ಸಿಗಬಹುದು. ರಾಜ್ಯದಲ್ಲಿ ನಮ್ಮ ಪಕ್ಷ ಸ್ಥಾಪನೆಯಾದಂದಿನಿಂದ ಮೊತ್ತ ಮೊದಲು ನಾವು ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವುದು.

ಇಂತಹ ಪ್ರಾತಿನಿಧಿಕ ಸಂಸ್ಥೆಗಳಲ್ಲಿ, ಸಮಿತಿಗಳಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಭಾಗವಹಿಸಬೇಕೇ ಬೇಡವೇ ಎಂದು ಪಕ್ಷದ ಪೊಲಿಟ್‌ಬ್ಯೂರೋ ಸಿದ್ಧ ಉತ್ತರ ನೀಡಲಾರದು. ಪ್ರತಿ ಒಂದು ಸಂದರ್ಭದಲ್ಲಿಯೂ ಪಕ್ಷದ ಸಂಬಂಧಪಟ್ಟ ರಾಜ್ಯ ಸಮಿತಿ, ಜಿಲ್ಲಾ ಸಮಿತಿ, ಪ್ರಾದೇಶಿಕ ಸಮಿತಿ ಇಂತಹ ಸಮಸ್ಯೆಗಳನ್ನು ಚರ್ಚಿಸಿ ನಿರ್ಧರಿಸಬೇಕಾಗುವುದು. ಅಂತಹದೇ ಸಂದರ್ಭಗಳಲ್ಲಿ ಇತರ ರಾಜ್ಯಗಳಲ್ಲಿನ ಇದುತನಕದ ಅನುಭವಗಳನ್ನು ಪೊಲಿಟ್ ಬ್ಯೂರೋ ಕರ್ನಾಟಕ ರಾಜ್ಯ ಸಮಿತಿಯೊಂದಿಗೆ ಹಂಚಿಕೊಳ್ಳಬಹುದು ಅಷ್ಟೆ. ನಮ್ಮ ಎಲ್ಲಾ ನಿರ್ಧಾರಗಳೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ವಿಸ್ತರಣೆಗೊಂಡು, ಕ್ರೋಢೀಕರಿಸಿಕೊಂಡು, ಬಲಯುತವಾಗಿ ಬೆಳೆಯುವುದರಲ್ಲಿ ಎಷ್ಟು ಸಹಾಯವಾಗುವುದು ಎಂಬ ಏಕೈಕ ಸತ್ವ ಪರೀಕ್ಷೆಯನ್ನವಲಂಬಿಸಿದೆ.

ಸರಿಧೋರಣೆಗೆ ಸಾಕ್ಷಿ

ನಮ್ಮ ಸುತ್ತು ಮುತ್ತಲೂ ಮಾರ್ಕ್ಸ್‌ವಾದಿಗಳಿರಬಹುದು. ಆದರೆ, ಅವರೆಲ್ಲರೂ ಭಾರತದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವರಲ್ಲ ಎಂದು ನೆನಪಿಡಬೇಕು. ಎಡ ಪ್ರಜಾ ಪ್ರಭುತ್ವ ಶಕ್ತಿಗಳಲ್ಲಿಯೂ ವಿವಿಧ ಮಟ್ಟದ ಪ್ರಜ್ಞಾವಂತರಿದ್ದಾರೆ – ಎಡ ಪಕ್ಷಗಳಲ್ಲಿಯೂ ಕಮ್ಯುನಿಸ್ಟರು, ಕಮ್ಯುನಿಸ್ಟರಲ್ಲಿಯೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟರಲ್ಲಿಯೂ ಸೈದ್ಧಾಂತಿಕ ಸ್ಪಷ್ಟತೆ ಉಳ್ಳವರು ಇದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದ ಮೇಲೂ 'ಬಲಪರಿಷ್ಕರಣ' ಹಾಗೂ 'ಎಡಪಂಥ' ವಾದಗಳ ವಿರುದ್ಧ ನಿರಂತರ ಹೋರಾಟ ಮುಂದುವರಿಯುತ್ತಲೇ ಇದೆ.

ಕೆಲವು ವರ್ಷಗಳಿಂದ ಟ್ರಾಟ್‌ಸ್ಕಿವಾದಿಗಳು, ನಕ್ಸಲ್‌ವಾದಿಗಳು, ಬಲ ಕಮ್ಯುನಿಸ್ಟರು, ಪ್ರೌಢ ಪಂಡಿತರು, ಕ್ರಿಶ್ಚಿಯನ್ ಮಿಶನರಿಗಳು ನಮ್ಮ ಪಕ್ಷದ ಬಲಗುಂದಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ, ವಿಜಯವಾಡ ಕಾಂಗ್ರೆಸ್‌ನಲ್ಲಿ ತಿಳಿಸಿದಂತೆ, ಸೋವಿಯತ್ ಯೂನಿಯನ್ ಮತ್ತು ಜನತಾ ಚೀನಾದ ಎರಡು ಕಮ್ಯುನಿಸ್ಟ್ ಪಕ್ಷಗಳೂ, ದೇಶದೊಳಗಿನ ಬಲ ಕಮ್ಯುನಿಸ್ಟ್ ಮತ್ತು ನಕ್ಸಲ್‌ವಾದಿ ಪಕ್ಷಗಳೂ ಗುಂಪುಗಳು, ಬಂಡವಾಳ ಶಾಹಿ-ಭೂಮಾಲಿಕ ಆಳುವ ಹಾಗೂ ವಿರೋಧಿ ಪಕ್ಷಗಳೂ, ಮತ್ತಿತರ ವಿರೋಧಿ ಶಕ್ತಿಗಳು ಕಳೆದ ಹದಿನೆಂಟು ವರ್ಷಗಳ ಅವಧಿಯಲ್ಲಿ ಸತತವಾಗಿ ನಮ್ಮ ಪಕ್ಷದ ಮೇಲೆ ಧಾಳಿ ನಡೆಸುತ್ತಿದ್ದರೂ, ನಮ್ಮ ಪಕ್ಷ ಇವೆಲ್ಲವುಗಳನ್ನು ಎದುರಿಸಿಕೊಂಡು ಜಯಶೀಲವಾದುದು ಒಂದು ದೊಡ್ಡ ದಾಖಲೆಯಾಗಿದೆ.

ಇಂದು ನಮ್ಮ ಪಕ್ಷ ದೇಶದಲ್ಲಿ ಅತಿ ದೊಡ್ಡ ವಿರೋಧಿ ಪಕ್ಷವಾಗಿದೆ. ಕೇರಳ ಮತ್ತಿತರ ಕೆಲವು ರಾಜ್ಯಗಳಲ್ಲಿಯೂ ನಮ್ಮ ಪಕ್ಷ ಅತ್ಯಂತ ದೊಡ್ಡ ವಿರೋಧಿ ಪಕ್ಷವಾಗಿದೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ನಮ್ಮ ಪಕ್ಷದ ನೇತೃತ್ವದ ಎಡರಂಗಗಳು ಎರಡನೇ ಅವಧಿಯ ಸರಕಾರಗಳನ್ನು ರಚಿಸಿವೆ. ಜನರು ನಮ್ಮ ಪಕ್ಷವನ್ನು ಭವಿಷತ್ತಿನ ಪಕ್ಷ ಎಂದು ಪರಿಗಣಿಸುತ್ತಿದ್ದಾರೆ. ಇವು ನಮ್ಮ ಪಕ್ಷದ ಸರಿ ಧೋರಣೆಗೆ, ಸರಿ ಮಾರ್ಗಕ್ಕೆ ಜೀವಂತ ಸಾಕ್ಷಿ ಹಾಗೂ ಅಪೂರ್ವ ಗೌರವ. ನಮ್ಮಲ್ಲಿ ತಪ್ಪುಗಳಾಗಿವೆ, ಆಗುತ್ತಿವೆ. ಕಾಲ ಕಷ್ಟವಾಗುತ್ತಿದೆ. ಆದರೂ ನಮ್ಮ ಪಕ್ಷದ ನೆಲೆಯನ್ನು ವಿಸ್ತರಿಸಲು ಸದ್ಯದ ಪರಿಸ್ಥಿತಿ ತುಂಬಾ ಅನುಕೂಲವಾಗಿದೆ.

ಸಂಘಟನೆಯ ಅಗತ್ಯ

ಪಕ್ಷದ ನೆಲೆಯ ವಿಸ್ತರಣೆ, ಕ್ರೋಢೀಕರಣ ಮುಂದುವರಿಯುತ್ತಿದ್ದಂತೆ, ಪಕ್ಷದ ಸಂಘಟನೆಯನ್ನು ಕೂಡ ಬಲಪಡಿಸುವುದು ಅತ್ಯಗತ್ಯ. ಹೇಗೆ ? ಪಕ್ಷದ ಒಳಗೆ ಪ್ರಜಾಪ್ರಭುತ್ವ, ಕಟ್ಟುನಿಟ್ಟಿನ ಕೇಂದ್ರೀಕೃತ ನಿರ್ದೇಶನ, ಕಾಲಕಾಲಕ್ಕೆ ಪಕ್ಷದ ಧೋರಣೆಗಳನ್ನು ರೂಪಿಸುವುದು ಮತ್ತು ಪಕ್ಷದ ಸದಸ್ಯರ ಕರ್ತವ್ಯ ನಿಷ್ಠೆಯನ್ನು ಪರಿಶೀಲಿಸಿ ಅರ್ಹರನ್ನು ಮಾತ್ರ ಪಕ್ಷದಲ್ಲಿ ಉಳಿಸಿಕೊಳ್ಳುವುದು ಹಾಗೂ ಅರ್ಹತೆಗೆ ಸರಿಯಾಗಿ ಭಡತಿ ನೀಡುವುದು. ಈ ಕ್ರಮಗಳನ್ನು ಅನುಸರಿಸದೇ ಇದ್ದರೆ ಪಕ್ಷದ ನೆಲೆಯನ್ನು ವಿಸ್ತರಿಸಲೂ ಸಾಧ್ಯವಿಲ್ಲ, ಕ್ರೋಢೀಕರಿಸಲೂ ಸಾಧ್ಯವಿಲ್ಲ. ಪಕ್ಷದೊಳಗೆ ಎಲ್ಲಾ ವಿಷಯಗಳ ಕುರಿತು ಪ್ರಶ್ನೋತ್ತರಗಳು ಕೆಳಗಿನಿಂದ ಮೇಲೆ, ಮೇಲಿನಿಂದ ಕೆಳಗೆ ಎಲ್ಲಾ ಮಟ್ಟಗಳಲ್ಲಿಯೂ ನಿರಂತರವಾಗಿ ನಡೆಯಬೇಕು. ಇಲ್ಲವಾದರೆ ಪಕ್ಷದ ಎಲ್ಲ ನಿರ್ಣಯಗಳೂ, ವರದಿಗಳೂ, ದಸ್ತವೇಜುಗಳು ಸುಂದರವಾಗಿ ಮುದ್ರಿತವಾಗಿ, ಗ್ರಂಥಾಲಯಗಳಲ್ಲಿ ಅಲಂಕಾರಿಕವಾಗಿ ಉಳಿಯಬಹುದು, ಅಷ್ಟೆ.

ಉದಾಹರಣೆಗೆ : ನಮ್ಮ ಪಕ್ಷದ ಮಧುರೈಯಲ್ಲಿ ನಡೆದ 9ನೇ ಕಾಂಗ್ರೆಸ್‌ನಲ್ಲಿ "ರಾಷ್ಟ್ರೀಯತೆ"ಯ ಕುರಿತಾಗಲೀ, ಜಲಂಧರ್‌ನಲ್ಲಿ ನಡೆದ 10ನೇ ಕಾಂಗ್ರೆಸ್‌ನಲ್ಲಿ "ಭೂಸುಧಾರಣೆ"ಯ ಕುರಿತಾಗಲೀ, ಅಂಗೀಕರಿಸಿದ್ದ ನಿರ್ಣಯಗಳನ್ನು ಪಕ್ಷದ ಸದಸ್ಯರಿಗೆ ಸರಿಯಾಗಿ ತಿಳಿಹೇಳಲು ನಾವು ಯಶಸ್ವಿಯಾಗಲಿಲ್ಲ. ಆದುದರಿಂದ ನಮ್ಮ ಸಂಗಾತಿಗಳು ರಾಷ್ಟ್ರೀಯತೆಯ ಪ್ರಶ್ನೆ ಬಂದಾಗ ಡಿ.ಎಂ.ಕೆ. / ಎ.ಐ.ಡಿ.ಎಂ.ಕೆ. ಪಕ್ಷಗಳ ಧೋರಣೆಗಳೇ ಸರಿ ಎಂದು ಪ್ರತಿಪಾದಿಸುವ ತಪ್ಪುಮಾಡುತ್ತಾರೆ. ಹಾಗೆಯೇ, ಭೂಸಮಸ್ಯೆಯ ಪ್ರಶ್ನೆ ಬಂದಾಗ ಭೂಮಿಯ ಮರುವಿತರಣೆಯ ಒಂದಂಶದ ಕುರಿತು ಮಾತ್ರ ಪ್ರತಿಪಾದಿಸುವ ತಪ್ಪು ಮಾಡುತ್ತಿದ್ದಾರೆ. ತೆರಿಗೆ ಭಾರ, ಋಣಭಾರ, ಬೆಳೆಗೆ ಯೋಗ್ಯ ಬೆಲೆ, ಸಾಲ ನೀರಾವರಿ ಗೊಬ್ಬರ ಇವುಗಳ ಸೌಲಭ್ಯ, ಮಾರುಕಟ್ಟೆಯ ಅನುಕೂಲತೆ, ಇತ್ಯಾದಿ ರೈತರ ಕುರಿತಾದ ತುರ್ತಿನ ಸಮಸ್ಯೆಗಳಿಗೆ ನಾವು ಹೆಚ್ಚಾಗಿ ಗಮನ ಕೊಡುತ್ತಿಲ್ಲ. ಕೃಷಿ ಕ್ಷೇತ್ರದಲ್ಲಿನ ನಮ್ಮ ಆಂದೋಳನವು ಭೂಮಿಯ ಮರು ವಿತರಣೆಯ ಮೂಲಭೂತ ವಿಷಯದೊಂದಿಗೇ ರೈತರ ಸದ್ಯದ ತುರ್ತಿನ ಸಮಸ್ಯೆಗಳನ್ನು ಎತ್ತಿ ಹಿಡಿಯಬೇಕು. ಹೆಚ್ಚುವರಿ ಭೂಮಿಯ, ಹಾಳುಬಿದ್ದ ಭೂಮಿಯ, ಅನುಪಯುಕ್ತ ಭೂಮಿಯ ಮರುವಿತರಣೆಯಾಗಬೇಕೆಂಬುದು ನಮ್ಮ ಧೋರಣೆ. ಆದರೆ ನಮ್ಮ ಕೆಲವು ಸಂಗಾತಿಗಳು ಸರಿಯಾದ ತಿಳುವಳಿಕೆ ಇಲ್ಲದೆ, ಯಾವುದೇ ಭೂಮಾಲಕನಿರಲಿ ಅವನ ವಿರುದ್ಧ ಕತ್ತಿ ಕಟ್ಟುತ್ತಾರೆ.

ಬುದ್ಧಿಜೀವಿಗಳು ಮತ್ತು ಕ್ರಾಂತಿಕಾರಿಗಳು

ಇನ್ನೊಂದು ಪ್ರಾಮುಖ್ಯವಾದ ವಿದ್ಯಮಾನವನ್ನು ನಾವು ಗಮನಿಸಬೇಕು. ಸಿದ್ಧಾಂತವು ಆಚರಣೆಯನ್ನನುಸರಿಸಿದೆ. ಸಿದ್ಧಾಂತವನ್ನು ನಮ್ಮ ತಿಳುವಳಿಕೆಯನ್ನು ಹರಿತಗೊಳಿಸಲು ಕಾರ್ಯ ದಕ್ಷತೆಯನ್ನು ಹೆಚ್ಚಿಸಲು ತಿಳಿದುಕೊಳ್ಳಬೇಕು. ಸಮಾಜವಾದಿ ವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆಗಿಂತ ಉತ್ತಮವಾದುದೆಂದು ಜಗಜ್ಜಾಹಿರವಾಗಿರುವ ಸದ್ಯದ ಸನ್ನಿವೇಶದಲ್ಲಿ ಹೊಸ ಬಲವು ಮೂಡಿ ಬರುತ್ತಿದೆ. ಬಂಡವಾಳಶಾಹಿ ರಾಜಕೀಯ ಅರ್ಥಶಾಸ್ತ್ರವು ಸಂಪೂರ್ಣವಾಗಿ ದಿವಾಳಿ ಹೊಂದಿರುವ ಈ ಸಂದರ್ಭದಲ್ಲಿ ಬರಹಗಾರರೂ, ತತ್ವ ಜ್ಞಾನಿಗಳು, ಪ್ರಾಧ್ಯಾಪಕರು, ಪಂಡಿತರು ಬಹು ಸಂಖ್ಯೆಯಲ್ಲಿ ಮಾರ್ಕ್ಸ್‌ವಾದದತ್ತ ತಮ್ಮ ಒಲವು ವ್ಯಕ್ತಪಡಿಸುತ್ತಿದ್ದಾರೆ. ತಾವೂ ಮಾರ್ಕ್ಸ್‌ವಾದಿಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಈ ಮೊದಲೇ ತಿಳಿಸಿದಂತೆ ಇವರೆಲ್ಲರನ್ನೂ ನಮ್ಮ ಪಕ್ಷದವರೆಂದು ಪರಿಗಣಿಸುವಂತಿಲ್ಲ. ಆದರೆ, ಇವರ ವಿಶೇಷ ಜ್ಞಾನವನ್ನು ನಮ್ಮ ಆಂದೋಳನ ಬೆಳೆಸಲು ಬಳಸಬಹುದು. ಇವರೊಂದಿಗೆ ನಾವು ಶ್ರಮಿಕ ವರ್ಗ ಹಿತಾಸಕ್ತಿಯ ದೃಷ್ಟಿ ಕೋಣದಿಂದ ಸೈದ್ಧಾಂತಿಕ ಚರ್ಚೆ ನಡೆಸಬಹುದು.

ಮಾರ್ಕ್ಸ್‌ವಾದ ಬೆಳೆದು ಬಂದುದೇ ವಾದ ವಿವಾದಗಳಿಂದ. ಮಾರ್ಕ್ಸ್‌ರ ಮಹಾನ್ ಕೃತಿ ಬಂಡವಾಳ ('Capital') ಆ ಕಾಲದ ಬಂಡವಾಳಶಾಹಿ ರಾಜಕೀಯ ಅರ್ಥ ಶಾಸ್ತ್ರಜ್ಞರ ವಿರುದ್ಧ ನಡೆಸಿದ ತೀವ್ರವಾದ ವಿವಾದಗಳ ಫಲಶ್ರುತಿಯಾಗಿದೆ. ಅಷ್ಟಲ್ಲದೆ, ಮಾರ್ಕ್ಸ್‌ರು ತಮ್ಮ ಮೂಲ ಗ್ರಂಥ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾತ್ರ

'ಬಂಡವಾಳ' ವನ್ನು ಬರೆಯಲು 17ನೇ ಶತಮಾನದಿಂದ ತನ್ನ ಕಾಲದವರೆಗಿನ ಎಲ್ಲಾ ಪ್ರಮುಖ ರಾಜಕೀಯ ಅರ್ಥಶಾಸ್ತ್ರಜ್ಞರ ಸಿದ್ಧಾಂತಗಳನ್ನು ಸುದೀರ್ಘವಾಗಿ ವಿಮರ್ಶಿಸಿ, ಟೀಕಿಸಿ ಬರೆದ ಟಿಪ್ಪಣಿಗಳನ್ನು ತಮ್ಮ "ಬಂಡವಾಳ" ಕೃತಿಯ ಸೈದ್ಧಾಂತಿಕ ನಿಲುವಿನ ಒರೆಗಲ್ಲಿಗೆ ಹಚ್ಚಿ ಪುನರ್ವಿಮರ್ಶಿಸಿದ ಟಿಪ್ಪಣಿಗಳನ್ನು ಮುಂದೆ ಮೂರು ಸಂಪುಟಗಳಲ್ಲಿ "ಅಧಿಕ ಮೌಲ್ಯದ ಸಿದ್ಧಾಂತಗಳು" (**Surplus Value Theories**) ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದುವು. ಗಂಭೀರವಾದ, ಪ್ರಬಲವಾದ ಸೈದ್ಧಾಂತಿಕ, ತಾತ್ವಿಕ ಹೋರಾಟಗಳಿಲ್ಲದಿದ್ದರೆ, ಶ್ರಮಿಕ ವರ್ಗದ ಆಂದೋಳನ ಬೆಳೆಯಲಾರದು.

ಸಮಾಜ ವಿಜ್ಞಾನಿಗಳ ಬಗ್ಗೆ ನಮಗೆ ಸಹಾನುಭೂತಿ ಇರಬೇಕು. ಗೌರವ ಇರಬೇಕು. ನಾವು ವಿಜ್ಞಾನಿಗಳಲ್ಲ, ಪಂಡಿತರಲ್ಲ, ಪ್ರಾಧ್ಯಾಪಕರಲ್ಲ. ಅವರ ಕುರಿತು ಕುತ್ಸಿತ ಭಾವನೆ ಇರಕೂಡದು. ನಾವು ಪ್ರಾಯೋಗಿಕ, ಕಾರ್ಯಶೀಲ, ಕ್ರಾಂತಿಕಾರಿಗಳು. ನಾವು ಅವರ ಕುರಿತು ಹೇಗೆ ನಮ್ರತೆಯಿಂದಿರಬೇಕೋ ಅವರೂ ನಮ್ಮ ಕುರಿತು ನಮ್ರರಾಗಿರಬೇಕು. ಬುದ್ಧಿಜೀವಿಗಳೂ, ಕ್ರಾಂತಿಕಾರಿಗಳೂ ಪರಸ್ಪರರಿಂದ ತಿಳಿದುಕೊಳ್ಳಬೇಕು. ಸ್ಫೂರ್ತಿ ಪಡೆಯಬೇಕು. ಸಿದ್ಧಾಂತ ಅಥವಾ ಪ್ರಯೋಗ ಮಾತ್ರ ಮಾರ್ಕ್ಸ್‌ವಾದವಾಗಲಾರದು. ಇವೆರಡರ ಐಕ್ಯತೆಯೇ ಮಾರ್ಕ್ಸ್‌ವಾದದ ಜೀವಾಳ. ಉದಾಹರಣೆಗೆ ಬಲ ಕಮ್ಯುನಿಸ್ಟ್ ಪಕ್ಷದ ಮುಖ್ಯ ನಾಯಕರಲ್ಲೊಬ್ಬರಾದ ಭೂಪೇಶ ಗುಪ್ತ ತಮ್ಮ ಪಕ್ಷದವರೇ ಆದ ಅಗ್ರಗಣ್ಯ ಸೈದ್ಧಾಂತಿಕರಲ್ಲೊಬ್ಬರಾದ ಮೊಹಿತ್‌ಸೇನ್ ಅವರ ವಿರುದ್ಧ ಕೃಷಿ ಕ್ಷೇತ್ರದಲ್ಲಿ ಬೆಳೆಗೆ ಯೋಗ್ಯ ಬೆಲೆಯ ಅಗತ್ಯತೆಯ ಕುರಿತು ತೀವ್ರವಾದ ವಿವಾದಕ್ಕಿಳಿಯಬೇಕಾಯಿತು. ಹಾಗೆಯೇ, ನಮ್ಮ ಪಕ್ಷದಲ್ಲಿಯೂ ಕ್ರಿಯಾಶೀಲ ಕ್ರಾಂತಿಕಾರರ ಹಾಗೂ ಮಾರ್ಕ್ಸ್‌ವಾದಿ ಸೈದ್ಧಾಂತಿಕರ ನಡುವೆ ತೀವ್ರ ವಾದವಿವಾದಗಳಾಗುತ್ತವೆ. ಅಂತಿಮವಾಗಿ ಪ್ರಾಯೋಗಿಕ ಅನುಭವ ಸಾರವೇ ಸಿದ್ಧಾಂತ.

ಕಲಾವಿದರು ಮತ್ತು ಕ್ರಾಂತಿಕಾರಿಗಳು

ಕರ್ನಾಟಕದಲ್ಲಿಯೇ ವಿಶ್ವವಿದ್ಯಾನಿಲಯ ಹಾಗೂ ಮತ್ತಿತರ ಪ್ರೌಢ ಶೈಕ್ಷಣಿಕ, ತಾಂತ್ರಿಕ. ವೈಜ್ಞಾನಿಕ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವೀಧರ ಮೇಧಾವಿಗಳೇ ನಾಲ್ಕೈದು ಸಾವಿರದಷ್ಟಾದರೂ ಇರಬಹುದು. ನಾವು ಅವರೊಂದಿಗೆ ಸೈದ್ಧಾಂತಿಕ ವಾದವಿವಾದಗಳಿಗಿಳಿಯದಿದ್ದರೆ, ಅವರು ತಮ್ಮ ವಿದ್ವತ್ ಶಕ್ತಿಯಿಂದ ನಮ್ಮನ್ನೇ ಗಲಿಬಿಲಿಗೊಳಿಸಬಹುದು. ಅದರೊಂದಿಗೆ ನಾವು ಸೈದ್ಧಾಂತಿಕ ವಾದವಿವಾದ ನಡೆಸುವುದರಿಂದ ನಮ್ಮ ತಿಳುವಳಿಕೆಯು ಇನ್ನಷ್ಟು ಸ್ಪಷ್ಟವಾಗುವುದು, ಪ್ರಕಾಶಮಾನವಾಗುವುದು. ಬುದ್ಧಿಜೀವಿಗಳಿಗೆ ಪ್ರಾಯೋಗಿಕ ಅನುಭವ ಇಲ್ಲದಿರುವುದರಿಂದ ನಾವು ಅವರಿಂದ ಕಲಿಯಬಹುದಾದಂತೆ, ಅವರೂ ನಮ್ಮಿಂದ ಕಲಿಯಬಹುದು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿದ್ಯಮಾನವನ್ನು ಗಮನಿಸಬೇಕು. ಬಂಡವಾಳಶಾಹಿ ಸಾಮಾಜಿಕ–ಸಾಂಸ್ಕೃತಿಕ ವ್ಯವಸ್ಥೆಯು ಹದಗೆಡುತ್ತಿದ್ದಂತೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಹೊಸ ಅಲೆಗಳು ತಲೆದೋರುತ್ತವೆ. ಉದಾಹರಣೆಗೆ: ಕರ್ನಾಟಕದಲ್ಲಿ ಬಂಡಾಯ ಸಾಹಿತ್ಯ ಮತ್ತು ಸಮುದಾಯ. ತತ್ವಜ್ಞಾನಿಗಳಂತೆ, ಪ್ರೌಢ ಪಂಡಿತರಂತೆ, ಬರಹಗಾರರೂ ಕಲಾವಿದರೂ ಹೆಚ್ಚು ಹೆಚ್ಚು ಶ್ರಮಿಕ ವರ್ಗದತ್ತ ಒಲವು ತೋರಿಸುತ್ತಿದ್ದಾರೆ. ಈ ವಿದ್ಯಮಾನ ಬಂಡವಾಳಶಾಹಿ ಸಂಸ್ಕೃತಿಯು ಅರ್ಥಹೀನವಾಗುತ್ತಿರುವುದಕ್ಕೂ, ನಾಶವಾಗುತ್ತಿರುವುದಕ್ಕೂ ಸಾಕ್ಷಿ. ಆದರೆ, ಹೊಸ ಅಲೆಯ ಬರಹಗಾರರೆಲ್ಲರೂ,ಕಲಾವಿದರೆಲ್ಲರೂ ಶ್ರಮಿಕ ವರ್ಗದ ಪರಿವಾರದವರೆಂದು ಪರಿಗಣಿಸಲು ಸಾಧ್ಯವಿಲ್ಲ. ಅವರು ತಾವು ಹಾಗೆ ಎಂದು ಹೇಳಿಕೊಳ್ಳಬಹುದು, ಅಥವಾ ಅವರಿಗೆ ಹಾಗಾಗಲು ಅಪೇಕ್ಷೆ ಇರಬಹುದು. ಆದರೆ, ಪರೀಕ್ಷಿಸದೆ ನಾವು ಅವರನ್ನು ನಮ್ಮವರೆಂದು ಸ್ವೀಕರಿಸಬಾರದು.

ಕಲೆ ಮತ್ತು ಸಾಹಿತ್ಯ ಇವುಗಳ ಬೆಳವಣಿಗೆಯು, ಪರಕೀಯ ವರ್ಚಸ್ಸುಗಳಿಂದ ಮುಕ್ತವಾಗಿದ್ದರೆ, ಶ್ರಮಿಕ ವರ್ಗದ ಆಂದೋಳನಕ್ಕೆ ಸಹಕಾರಿಯಾಗುವುದು. ಇಂತಹ ಕಲಾವಿದರು, ಸಾಹಿತಿಗಳು ನಮ್ಮ ಕಡೆಗೆ ಬರುವಾಗ ಅವರ ಅಳಿದುಳಿದ ಬಂಡವಾಳಶಾಹಿ ಪಾಳೆಯಗಾರಿ ಆಚಾರ ವಿಚಾರಗಳ ಹೆಣಭಾರವನ್ನೂ ತರುವರು. ಅವುಗಳನ್ನು ಕಳಚಿಕೊಳ್ಳಲು ನಿರಂತರವಾಗಿ ವಿಮರ್ಶೆ, ಸ್ವವಿಮರ್ಶೆ ನಡೆಯಬೇಕು. ವಾದ ವಿವಾದಗಳು ನಡೆಯಬೇಕು. ಸಮಾಜವಿಜ್ಞಾನಿಗಳ ವಿಷಯದಲ್ಲಿ ತಿಳಿಸಿದಂತೆ, ಸಾಹಿತಿಗಳ ಮತ್ತು ಕಲಾವಿದರ ವಿಷಯದಲ್ಲಿಯೂ ನಾವು ಸರಿಯಾಗಿ ನಡೆದುಕೊಳ್ಳಬೇಕು. ಪರಸ್ಪರ ವಿಚಾರ ವಿನಿಮಯ, ಗೌರವ, ಸಹಾನುಭೂತಿ, ಸಹಕಾರ, ಸ್ಫೂರ್ತಿ ಇರಬೇಕು. ನಮ್ಮ ತಿಳುವಳಿಕೆಯನ್ನು ಸ್ಪಷ್ಟ ಪಡಿಸಿಕೊಂಡು, ಹರಿತಗೊಳಿಸಿಕೊಂಡು, ಹೊಸದಾಗಿ ಬರುತ್ತಿರುವ ಸಾಹಿತಿಗಳಿಗೆ, ಕಲಾವಿದರಿಗೆ ನಮ್ಮ ಗುರಿ ಧೋರಣೆಗಳನ್ನು ತಿಳಿಸಿ ಅವರನ್ನು ಸರಿ ಮಾರ್ಗಕ್ಕೆ ತರಬೇಕು. ನಮ್ಮ ಸಂಗಾತಿಗಳಲ್ಲಿ ಅನೇಕರು 50 ವರ್ಷಗಳ ಅನುಭವಸ್ಥರಾಗಿದ್ದರೂ, ಅವರು ತಮ್ಮ ಹಳೆಯ ಪಳೆಯುಳಿಕೆಯ ಆಚಾರವಿಚಾರಗಳಿಂದ ಇನ್ನೂ ಸಂಪೂರ್ಣವಾಗಿ ಮುಕ್ತರಾಗಿಲ್ಲ. ಅವರ ಬೌದ್ಧಿಕ ಮಟ್ಟವನ್ನು ಉನ್ನತಗೊಳಿಸಲು ಸತತ ಪ್ರಯತ್ನಗಳು ನಡೆಯಬೇಕು.

——

ಚೀನಾಗೆ ಶುಭಾಶಯಗಳು

ಜನತಾ ಚೀನಾದ ಸ್ಥಾಪನೆಯಾದ 34ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಸಿಪಿಐ (ಎಂ)ನ ಕೇಂದ್ರ ಸಮಿತಿಯು ತನ್ನ ಕ್ರಾಂತಿಕಾರಿ ಶುಭಾಶಯಗಳನ್ನು ಕಮ್ಯುನಿಸ್ಟ್ ಪಕ್ಷ ಹಾಗೂ ಚೀನಾದ ಜನತೆಗೆ ಕೋರುತ್ತದೆ. ಚೀನಾದ ಮಹಾನ್ ಕ್ರಾಂತಿಯು ವಸಾಹತುಶಾಹಿಗೆ ಮರಣಾಂತಿಕ ಪೆಟ್ಟು ನೀಡಿದ್ದಲ್ಲದೆ ಜಾಗತಿಕವಾಗಿ ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕೆ ಪೂರಕವಾದ ಪರಿಸ್ಥಿತಿಯನ್ನು ನಿರ್ಮಿಸಿತು.

ಜನತಾ ಚೀನಾವು ಇತ್ತೀಚಿನ ವರ್ಷಗಳಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದೆ. 1982ರಲ್ಲಿ ಆಹಾರ ಉತ್ಪಾದನೆಯು 353.43 ಮಿಲಿಯನ್ ಮುಟ್ಟಿದ್ದು ವಾರ್ಷಿಕವಾಗಿ ಕೃಷಿ ಉತ್ಪಾದನೆಯು ಶೇಕಡ 7 ರಿಂದ 9 ಅಧಿಕಗೊಳ್ಳುತ್ತಿದೆ.

ಉನ್ನತ ಮಟ್ಟದ ಸಂಸ್ಕೃತಿ ಹಾಗೂ ಪ್ರಜಾಪ್ರಭುತ್ವವನ್ನೊಳಗೊಂಡ ಸಮಾಜವಾದಿ ರಾಜ್ಯವನ್ನು ಕಟ್ಟುವ ಆಧುನೀಕರಣದ ಪಥದಲ್ಲಿ ಚೈನ ಮುನ್ನಡೆಯುತ್ತಿದೆ. ಸರ್ಕಾರ ಮತ್ತು ಜನತೆ ಸಮಾಜವಾದಿ ಆರ್ಥಿಕ ಬೆಳವಣಿಗೆಯನ್ನು ಮುಖ್ಯ ಗುರಿಯನ್ನಾಗಿರಿಸಿಕೊಂಡಿದೆ. ಚೀನ ಕಮ್ಯುನಿಸ್ಟ್ ಪಕ್ಷ ಮತ್ತು ಚೀನಾದ ಜನತೆಯು ಈ ಪ್ರಯತ್ನದಲ್ಲಿ ಯಶಸ್ಸುಸಿಗಲೆಂದು ಸಿಪಿಐ (ಎಂ) ನ ಕೇಂದ್ರ ಸಮಿತಿಯು ಹಾರೈಸುತ್ತದೆ.

ಜನತಾ ಚೀನವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಒಪ್ಪಬೇಕಾದರೂ ತಮ್ಮ 'ಎರಡು ಚೀನಾಗಳು' ನೀತಿಯನ್ನು ಮುಂದುವರಿಸುತ್ತಿದೆ. ತೈವಾನ್‌ಗೆ ಅಮೆರಿಕಾವು ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ.

ಅಮೆರಿಕವು ಚೀನಾದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿರುವುದನ್ನು ಚೀನಾವು ವಿರೋಧಿಸುತ್ತಿದೆ. ಇದನ್ನು ಕೇಂದ್ರ ಸಮಿತಿಯು ಬೆಂಬಲಿಸುವುದಲ್ಲದೆ ಎರಡು ಚೀನಾಗಳನ್ನು ಪುನರ್ ಐಕ್ಯಗೊಳಿಸುವ ಚೀನಾದ ಪ್ರಯತ್ನಕ್ಕೆ ಯಶಸ್ಸನ್ನು ಕೋರುತ್ತದೆ.

ಭಾರತ–ಚೀನಾದ ಸಂಬಂಧಗಳು ಮಾತುಕತೆಗಳ ಮೂಲಕ ಉತ್ತಮಗೊಳ್ಳಬೇಕೆಂದು ಸಿಪಿಐ(ಎಂ) ಎಂದಿನಿಂದಲೂ ಪ್ರತಿಪಾದಿಸುತ್ತಿದೆ, ಚೀನಾ ಕಮ್ಯುನಿಸ್ಟ್ ಪಕ್ಷ ಮತ್ತು ಸಿಪಿಐ(ಎಂ)ಗಳ ನಡುವೆ ಏರ್ಪಟ್ಟಿರುವ ಸಂಬಂಧದ ಬಗ್ಗೆ ಕೇಂದ್ರ ಸಮಿತಿಯು ಹರ್ಷವನ್ನು ವ್ಯಕ್ತಪಡಿಸುತ್ತದೆ.

ಹರಿಹರ ಪಾಲಿಫೈಬರ್ಸ್ ಒಪ್ಪಂದ

180 ಹಂಗಾಮಿ ಕಾರ್ಮಿಕರ ಖಾಯಂ

ಹರಿಹರ ಪಾಲಿಫೈಬರ್ಸ್ ಕಾರ್ಖಾನೆಯಲ್ಲಿ ಹಂಗಾಮಿ ಕಾರ್ಮಿಕರಾಗಿ ದುಡಿಯುತ್ತಿದ್ದ 237 ಕಾರ್ಮಿಕರ ಪೈಕಿ 180 ಜನರು ಖಾಯಂಗೊಳಿಸಲ್ಪಟ್ಟಿದ್ದಾರೆ. ರಾಜ್ಯದಲ್ಲೇ ಮೊಟ್ಟ ಮೊದಲನೆಯ ಬಾರಿಗೆ ರಾಜ್ಯ ಸರ್ಕಾರ ನೇಮಿಸಿದ 'ಬೋರ್ಡ್ ಆಫ್ ಕನ್ಸಿಲಿಯೇಶನ್' ಮೂಲಕ ಕಾರ್ಮಿಕ ಸಂಘ ಮತ್ತು ಆಡಳಿತ ವರ್ಗದ ನಡುವೆ ನಡೆದ ಒಪ್ಪಂದದ ಪ್ರತಿಫಲ ಇದು. ಮಾಜೀ ಲೇಬರ್ ಕಮಿಷನರ್ ಆಗಿದ್ದ ಶ್ರೀ ಬಿ. ಎನ್. ಬೆಟ್ ಕರೂರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಮಾತುಕತೆಯಲ್ಲಿ ಕಾರ್ಮಿಕರ ಪ್ರತಿನಿಧಿಗಳಾಗಿ ಕಾ. ವಿ. ಜೆ. ಕೆ. ನಾಯರ್ ಮತ್ತು ಎನ್. ಸಿ. ಮದಾರ್ ಹಾಗೂ ಆಡಳಿತ ವರ್ಗದ ಪ್ರತಿನಿಧಿಗಳಾಗಿ ಶ್ರೀ ವಿ. ಆರ್. ಕುಲಕರ್ಣಿ ಮತ್ತು ಬಿ. ಎಸ್. ಸಿ. ರಾವ್ ಅವರುಗಳು ಭಾಗವಹಿಸಿದ್ದರು.

ಈಗ ಖಾಯಂ ಗೊಳಿಸಲ್ಪಟ್ಟಿರುವ 180 ಕಾರ್ಮಿಕರು ಹಿಂದೆ 11 ರೂಪಾಯಿಗಳ ದಿನಗೂಲಿ ಪಡೆಯುತ್ತಿದ್ದು ಈಗ ಅವರು 1-10-83 ರಿಂದ 520 ರೂ. ಮಾಸಿಕ ವೇತನ ಪಡೆಯಲಿದ್ದಾರೆ ಅಲ್ಲದೆ ಅವರ ವೇತನ 1-10-84ರಿಂದ 850 ರೂಪಾಯಿಗಳಿಗೆ ಹೆಚ್ಚಲಿದೆ. ಇದಲ್ಲದೆ ಸುಮಾರು 300 ರೂಪಾಯಿಗಳಷ್ಟು ಹೆಚ್ಚಿನ ಸವಲತ್ತನ್ನು ಕಾರ್ಮಿಕರು ಪಡೆಯಲಿದ್ದಾರೆ. ಇದರಿಂದಾಗಿ ಈ ಕಾರ್ಮಿಕರ ವಾರ್ಷಿಕ ವೇತನ ನಾಲ್ಕು ಪಟ್ಟು ಹೆಚ್ಚಿದಂತಾಗಿದೆ.

• ಖಾಯಂ ಆಗದಿರುವ ಇತರ 57 ಕಾರ್ಮಿಕರಿಗೆ ತಲಾ 16,500 ರೂಪಾಯಿಗಳ ಪರಿಹಾರ ದೊರೆಯಲಿದೆ.

108 ಮಂದಿ ಕಂಟ್ರಾಕ್ಟ್ ಕಾರ್ಮಿಕರಿಗೆ ದಿನಗೂಲಿಯಲ್ಲಿ ಏಳು ರೂಪಾಯಿ ಐವತ್ತು ಪೈಸೆ ಹೆಚ್ಚಳ ಆಗಿ ಕನಿಷ್ಠ ಕೂಲಿ 16 ರೂ.ಗಳಿಗೇರಿದೆ. ಇವರ ವಾರ್ಷಿಕ ಹೆಚ್ಚಳ ದಿನಗೂಲಿಯಲ್ಲಿ ಎರಡು ರೂಪಾಯಿಗಳು.

ಹಂಗಾಮಿ ಕಂಟ್ರಾಕ್ಟ್ ಕಾರ್ಮಿಕರ ಹೋರಾಟ ನಡೆದಾಗ ಮಾರ್ಚಿ 20 ರಿಂದ ಒಂದು ತಿಂಗಳ ಕಾಲ ಫ್ಯಾಕ್ಟರಿ ಮುಚ್ಚಿತ್ತು. ಈ ಅವಧಿಯಲ್ಲಿ ಸಂಬಳ ಕಳೆದುಕೊಂಡಿದ್ದ 1326 ಖಾಯಂ ಕೆಲಸಗಾರರಿಗೆ ಸರಾಸರಿ 250 ರೂ. ದೊರೆಯಲಿದೆ. (ಸ್ಕಿಲ್ಡ್ – 300, ಸೆಮಿ ಸ್ಕಿಲ್ಡ್ – 250, ಮತ್ತು ಅನ್ ಸ್ಕಿಲ್ಡ್ – 200.)

ದಕ್ಷಿಣ ಕೊರಿಯ[redacted]ದಲ್ಲಿ

ಪ್ರಜಾಪ್ರಭುತ್ವಕ್ಕಾಗಿ ಶಾಂತಿಯುತ ಹೋರಾಟ

ದಕ್ಷಿಣ ಕೊರಿಯಾದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಕಿಮ್ ಯ್ಯೂಂಗಾಸಾಮ್ ಹಾಗೂ ಇತರ 23 ಪ್ರಮುಖ ರಾಜಕೀಯ ವ್ಯಕ್ತಿಗಳು ಸೆಪ್ಟಂಬರ್ 27ರಂದು ನೀಡಿದ ಜಂಟಿ ಹೇಳಿಕೆಯಲ್ಲಿ ಸಂವಿಧಾನಿಕ ಬದಲಾವಣೆಗಳಿಗಾಗಿ ಹಾಗೂ ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆಗಾಗಿ ಶಾಂತಿಯುತ ಹಾಗೂ ಅಹಿಂಸಾತ್ಮಕ ಹೋರಾಟ ನಡೆಸುತ್ತೇವೆ ಎಂದು ಘೋಷಿಸಿದ್ದಾರೆ.

1980ರ ಮೇ 17ರಂದು ಸೈನಿಕ ಕ್ಷಿಪ್ರ ಕ್ರಾಂತಿಯಿಂದ ಅಧಿಕಾರಕ್ಕೆ ಬಂದು ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ನಡೆಯುತ್ತಿರುವ ದಕ್ಷಿಣ ಕೊರಿಯಾದ ಮಿಲಿಟರಿ ಸರಕಾರಕ್ಕೆ ಇದು ವಿರೋಧ ಪಕ್ಷಗಳ ಮೊದಲ ಸವಾಲು ಎಂದು ಹೇಳಲಾಗಿದೆ. ಇಲ್ಲಿ ಎಲ್ಲಾ ರಾಜಕೀಯ ಪಕ್ಷಗಳನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗಿದೆ.

ಈ ಜಂಟಿ ಹೇಳಿಕೆಯಲ್ಲಿ ರಾಜಕೀಯ ಬಂದಿಗಳ ಬಿಡುಗಡೆ ಹಾಗೂ ಪತ್ರಿಕಾ ಸ್ವಾತಂತ್ರ್ಯ ಪುನರ್ ಸ್ಥಾಪನೆಯಾಗಬೇಕೆಂದು ಒತ್ತಾಯಿಸಲಾಗಿದೆ.

ಮೈಕೋ ಖಾನ್ ಜತೆ ಒಪ್ಪಂದ ಪ್ರಜಾಪ್ರಭುತ್ವ ವಿರೋಧಿ

1951ರಲ್ಲಿ ಒಂದು ಕೋಟಿ ರೂ.ನ ಬಂಡವಾಳದಿಂದ ಆರಂಭವಾಗಿ ಇದುವರೆಗೆ 100 ಕೋಟಿ ರೂ.ಗಳಷ್ಟು ಲಾಭವನ್ನು ಸೂರೆಮಾಡಿ ವಿದೇಶಕ್ಕೆ ಕಳುಹಿಸಿರುವ ಬಹುರಾಷ್ಟ್ರೀಯ ಕಂಪೆನಿ ಮೈಕೋದಲ್ಲಿ ಮತ್ತೆ ಕಾಂಗ್ರೆಸ್ (ಐ) ಎಂ.ಪಿ., ಎಫ್.ಎಂ. ಖಾನರ ಪ್ರವೇಶ ಗಲಭೆಗಳಿಗೆ ಎಡೆಮಾಡಿಕೊಟ್ಟಿದೆ,

ಆಗಸ್ಟ್ ತಿಂಗಳಲ್ಲಿ ಜನತಾ ಸರಕಾರವನ್ನು ಉರುಳಿಸುವ ತನ್ನ ಆಟವನ್ನು ಕಾಂಗ್ರೆಸ್ (ಐ) ಆರಂಭಿಸಿತು. ಸ್ವಲ್ಪ ಸಮಯ ತಣ್ಣಗಾಗಿದ್ದ ಎಫ್. ಎಂ. ಖಾನ್ ಮತ್ತೆ ಸಕ್ರಿಯರಾದರು. ಜನತಾ ಸರಕಾರ ಹೆಚ್ಚು ದಿನ ಉಳಿಯಲಿಕ್ಕಿಲ್ಲ ಎಂದು ಭಾವಿಸಿದ ಮೈಕೋ ಆಡಳಿತ ವರ್ಗ ಕಾರ್ಮಿಕರ ಬೆನ್ನ ಹಿಂದೆ ಮೈಕೋ ಕಾರ್ಮಿಕರ ಸಂಘ ಅರ್ಪಿಸಿದ್ದ ಬೇಡಿಕೆಯ ಪಟ್ಟಿಯನ್ನು ಕಡೆಗಣಿಸಿ ಎಫ್. ಎಂ. ಖಾನರೊಂದಿಗೆ ವೈಯಕ್ತಿಕವಾಗಿ ಕಾನೂನು ಬಾಹಿರ ಒಪ್ಪಂದ ಮಾಡಿಕೊಂಡಿತು. ತಕ್ಷಣ ಇದನ್ನು ಪ್ರತಿಭಟಿಸಿ ಹಾಗೂ ಮೈಕೋ ಕಾರ್ಮಿಕ ಸಂಘಕ್ಕೆ ಚುನಾವಣೆಗಳಾಗಬೇಕೆಂದು ಕಾರ್ಮಿಕರು ಈ ತಿಂಗಳ 10 ಹಾಗೂ 11 ರಂದು ಯಶಸ್ವೀ ಮುಷ್ಕರ ನಡೆಸಿದರು. 10 ರಂದು ಖಾನ್ ಬೆಂಬಲಿಗರ ಪ್ರಚೋದನೆಯಿಂದಾಗಿ ಗಲಭೆ ನಡೆದು ಪೋಲಿಸರು ಗಾಳಿಯಲ್ಲಿ ಗುಂಡು ಹಾರಿಸಿದರು.

ಇದಕ್ಕೆ ಮೊದಲು ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಬೆಂಗಳೂರಿನಲ್ಲಿಲ್ಲದ ಸಮಯ ಕಾದು ಖಾನ್‌ರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಹವಣಿಕೆಯಲ್ಲಿ ಆಡಳಿತವರ್ಗ ವಾರದ ರಜಾದಿನವನ್ನು ಸೋಮವಾರದ ಬದಲು ಶನಿವಾರದಂದು ಘೋಷಿಸಿತ್ತು. ಆ ದಿನ ಖಾನ್‌ರವರು ನಡೆಸಿದ ಸಭೆಯಲ್ಲಿ ನೂರು ಮಂದಿಯೂ ಭಾಗವಹಿಸಿರದಿದ್ದರೆ ಮೈಕೋ ಕಾರ್ಮಿಕ ಸಂಘ ನಡೆಸಿದ ಸಭೆಯಲ್ಲಿ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು.

ಈ ನಡುವೆ ಲೇಬರ್ ಕಮಿಶನರ್ ಚುನಾವಣಾ ಅಧಿಕಾರಿಯನ್ನು ನೇಮಿಸಿ ಸಂಘದ ಚುನಾವಣೆಗೆ ಸಂಬಂಧಪಟ್ಟಂತೆ ವೇಳಾ ಪಟ್ಟಿಯನ್ನು ಹೊರಡಿಸಿದರು, ಡೆಪ್ಯುಟಿ ಲೇಬರ್ ಕಮಿಶನರ್ ಅಕ್ರಮ ಒಪ್ಪಂದದ ವಿರುದ್ಧ ಮುಷ್ಕರದ ಬಗ್ಗೆ ಮಾತುಕತೆ ಆರಂಭಿಸಲು ಕ್ರಮ ಕೈಗೊಂಡರು. ಇವನ್ನೆಲ್ಲಾ ಗಮನಿಸಿ ಸಂಘದ ಸರ್ವ ಸದಸ್ಯರ ಸಭೆ ಮುಷ್ಕರವನ್ನು ನಿಲ್ಲಿಸಿ 12ನೇ ತಾರೀಖಿನಿಂದ ಕೆಲಸಕ್ಕೆ ಹಾಜರಾಗುವಂತೆ ಕಾರ್ಮಿಕರಿಗೆ ಸಲಹೆ ನೀಡಿತು.

ಲೇಬರ್ ಕಮಿಶನರ್ ಪ್ರಕಟಿಸಿದ ವೇಳಾಪಟ್ಟಿಯ ಪ್ರಕಾರ ಅಕ್ಟೋಬರ್ 28 ರಂದು ಮತದಾರ ಪಟ್ಟಿಯ ಪ್ರಕಟಣೆ, ನವಂಬರ್ 7ರವರೆಗೆ ಮತದಾರ ಪಟ್ಟಿಗೆ ತಿದ್ದುಪಡಿಗೆ ಅರ್ಜಿ ಸ್ವೀಕಾರ, 9 ರಂದು ಅಂತಿಮವಾಗಿ ಮತದಾರ ಪಟ್ಟಿಯ ಪ್ರಕಟಣೆ ನಡೆಯುತ್ತದೆ. ನಾಮಪತ್ರಗಳ ಸಲ್ಲಿಕೆ ನವಂಬರ್ 11 ರಂದು, ಅವುಗಳ ಪರಿಶೀಲನೆ 14ರಂದು ಹಾಗೂ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯ ಪ್ರಕಟಣೆ 16 ರಂದು ನಡೆಯುವುದು. ನವಂಬರ್ 18 ರವರೆಗೆ ನಾಮಪತ್ರ ವಾಪಸ್ಸು ಪಡೆಯಲು ಅವಕಾಶವಿದೆ. 21 ರಂದು ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟವಾಗುತ್ತದೆ. ಚುನಾವಣೆಯ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ಹೇಳಲಾಗಿದೆ.

ಈ ಸಂದರ್ಭದಲ್ಲಿ ಕಾರ್ಮಿಕರ ಶಕ್ತಿಶಾಲಿ ಸಂಘಟಣಯನ್ನು ಎಂದೂ ಸಹಿಸದ ಮೈಕೋ ಆಡಳಿತ 1981 ರಿಂದಲೂ ಎಫ್. ಎಂ. ಖಾನರನ್ನು ಕಾರ್ಮಿಕರ ಮೇಲೆ ಹೇರಲು ಪ್ರಯತ್ನಿಸುತ್ತಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆ ವರ್ಷದ ಏಪ್ರಿಲ್ ತಿಂಗಳಲ್ಲಿ ಕಾರ್ಖಾನೆಯೊಳಗೆ ಗಲಭೆ ನಡೆಸಿ ಲಾಕೌಟ್ ಹೇರಿ, ಸಂಘದ ಎಲ್ಲಾ ಪದಾಧಿಕಾರಿಗಳನ್ನು ಕೆಲಸದಿಂದ ವಜಾಮಾಡಲಾಗಿತ್ತು, ಹಾಗೂ 65 ಕಾರ್ಮಿಕರು ಸಂಸ್ಪೆಂಡ್ ಆಗಿದ್ದರು. ಕಾರ್ಖಾನೆಯೊಳಗೆ ಯೂನಿಯನ್ ಕಚೇರಿ ತೆರೆಯುದಂತೆ ಗೂಂಡಾಗಿರಿ ನಡೆಸಿ ಆಗಿನ ಸರಕಾರೀ ಯಂತ್ರವನ್ನು ದುರುಪಯೋಗ ಪಡಿಸಿಕೊಂಡು ಒಂದು ಅಕ್ರಮ ಒಪ್ಪಂದವನ್ನು ಎಫ್. ಎಂ. ಖಾನರೊಂದಿಗೆ ಮಾಡಿಕೊಳ್ಳಲಾಯಿತು ಇದನ್ನು ಪ್ರಶ್ನಿಸಿರುವ ಮೈಕೋ ಕಾರ್ಮಿಕರ ಸಂಘದ ಅರ್ಜಿ ಸರ್ವೋಚ್ಚ ನ್ಯಾಯಾಲಯದಲ್ಲಿದೆ.

ಈ ರೀತಿ ಸಂಘದ ನಾಯಕತ್ವವನ್ನು ಮುರಿಯುವ ಮೈಕೋ-ಎಫ್. ಎಂ. ಖಾನ್ ಕುತಂತ್ರ ಫಲಕಾರಿಯಾಗಲಿಲ್ಲ, ಅಡಿಶನಲ್ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ವಜಾ ಆದ ಕಾರ್ಮಿಕರಿಗೆ ಪರಿಹಾರ ಧನ ಕೊಡಬೇಕೆಂದು ಹಾಗೂ ಎಫ್. ಎಂ. ಖಾನರು ಸಂಘದ ಚುನಾಯಿತ ಅಧ್ಯಕ್ಷರಲ್ಲವೆಂದು ಆಜ್ಞೆ ನೀಡಿತು. ಹೈಕೋರ್ಟ್ ನ್ಯಾಯಮೂರ್ತಿ ಚಂದ್ರಕಾಂತರಾಜ ಅರಸರು ಈ ಆಜ್ಞೆಯನ್ನು ಪ್ರಶ್ನಿಸಿದ ಖಾನರ ತಕರಾರನ್ನು ತಳ್ಳಿಹಾಕಿದರು, ಅಲ್ಲದೆ 1981 ರಲ್ಲೇ ನಡೆಯ ಬೇಕಾಗಿದ್ದ ಸಂಘದ ಚುನಾವಣೆ 1983ರ ಎಪ್ರಿಲ್ 30 ರೊಳಗೆ ನಡೆಯಬೇಕೆಂದು ಹೇಳಿದರು. ಇದಕ್ಕೆ ಆರಂಭಿಕ ಹೆಜ್ಜೆಯಾಗಿ ಮಾರ್ಚ್ ತಿಂಗಳಲ್ಲಿ ನಡೆದ ಸರ್ವ ಸದಸ್ಯರ ಸಭೆ ಸೂರ್ಯನಾರಾಯಣರಾವ್ ಹಾಗೂ ಎ. ಕೆ. ಸುಬ್ಬಯ್ಯನವರನ್ನು ಮಾತ್ರ ಗೌರವ ಸದಸ್ಯರಾಗಿ ಸ್ವೀಕರಿಸಿತು. ಎಫ್. ಎಂ. ಖಾನರ ಬೆಂಬಲಿಗರು ಖಾನರ ಹೆಸರು ಸೂಚಿಸದೆ ಸುಬ್ಬಯ್ಯನವರ ಹೆಸರು ಸೂಚಿಸಿದ್ದರೆಂಬುದನ್ನು ಇಲ್ಲಿ ಗಮನಿಸಬೇಕು.

ಹಿಂದೆ ಹೇಳಿದ ಎರಡು ಬೇಡಿಕೆ ಬಗ್ಗೆ ಮಾತುಕತೆ ನಡೆಸಲು ಸಂಘವನ್ನು ಹಾಗೂ ಆಡಳಿತ ವರ್ಗವನ್ನು ಕರೆಸುವುದಾಗಿ ಮಂತ್ರಿಗಳಾದ ರಘುಪತಿಯವರು ವಿಧಾನ ಸಭೆಯಲ್ಲಿ ಹೇಳಿದ್ದರು. ಆದರೆ ಆಡಳಿತ ವರ್ಗ ಒಂದಿಲ್ಲೊಂದು ನೆವವೊಡ್ಡಿ ಮಾತುಕತೆಗೆ ಬರಲು ತಪ್ಪಿಸಿಕೊಳ್ಳುತ್ತಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡುತ್ತಾ ಕಾಂ. ಸೂರ್ಯನಾರಾಯಣರಾವ್‌ರವರು ಎಫ್. ಎಂ. ಖಾನ್ ಮತ್ತು ಬಹುರಾಷ್ಟ್ರೀಯ ಮೈಕೋ ಆಡಳಿತವರ್ಗದ ಈ ಕೃತ್ಯ ಕಾರ್ಮಿಕ ಸಂಘಗಳ ಪ್ರಜಾಸತ್ತಾತ್ಮಕ ಕಾರ್ಯ ನಿರ್ವಹಣೆಗೆ ಒಂದು ಸವಾಲು ಎಂದು ಹೇಳಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಹಾಗೂ ಕಾರ್ಮಿಕ ವರ್ಗವನ್ನು ಶೋಷಿಸುವುದು ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಧೋರಣೆಯೇ ಆಗಿದೆ. ಮೈಕೋ ಕೂಡಾ ಅದಕ್ಕೆ ಹೊರತಲ್ಲ. ಬಹುರಾಷ್ಟ್ರೀಯ ಕಂಪನಿಗಳು ಈ ರೀತಿ ಕಾರ್ಮಿಕ ಸಂಘಗಳ ಹಕ್ಕುಗಳನ್ನು, ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸಲು ಪ್ರಯತ್ನಿಸುವುದರ ವಿರುದ್ಧ ಪ್ರತಿಭಟನೆಯ ದನಿ ಮೊಳಗಿಸಬೇಕೆಂದು ಕಾಂ. ಸೂರಿಯವರು ರಾಜ್ಯದ ಹಾಗೂ ದೇಶದ ಕಾರ್ಮಿಕ ವರ್ಗಕ್ಕೆ ಕರೆ ನೀಡಿದ್ದಾರೆ,

---

ಸಂವಿಧಾನದ 356ನೇ ವಿಧಿ ರದ್ದಾಗಬೇಕು

(3ನೇ ಪುಟದಿಂದ)

ಮತ್ತು ವ್ಯವಸ್ಥೆ ನಿಸ್ಸಂಶಯವಾಗಿಯೂ ರಾಜ್ಯಪಟ್ಟಿಗೆ ಸೇರಿದೆ.

ನನ್ನ ಅನುಭವದ ಆಧಾರದ ಮೇಲೆ ನಾನು ಈ ಕೆಲವು ಸೂಚನೆಗಳನ್ನು ಮಂಡಿಸಬಯಸುತ್ತೇನೆ :

1. ರಾಜ್ಯಪಾಲರ (ಆ ಹುದ್ದೆ ಮುಂದುವರಿಯುವುದಾದರೆ) ಕಾರ್ಯನಿರ್ವಹಣೆಗೆ ಹಾಗೂ ಅಧಿಕಾರಗಳನ್ನು ಪುನರ್ಪರೀಕ್ಷಿಸಿ ರಾಜ್ಯದ ಸಂವೈಧಾನಿಕ ವ್ಯವಸ್ಥೆಯಲ್ಲಿ ಆ ಹುದ್ದೆಯನ್ನು ಐದನೇ ಚಕ್ರವಾಗಿ ಬಳಸುವ ಎಲ್ಲಾ ಸಾಧ್ಯತೆಗಳನ್ನು ತಪ್ಪಿಸಬೇಕು.

2. ಸಂವಿಧಾನದ 356ನೇ ವಿಧಿ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಕಲಮುಗಳನ್ನು ತೆಗೆದುಹಾಕಬೇಕು.

3. ರಾಜ್ಯ ವಿಧಾನ ಮಂಡಲ ಹಾಗೂ ಕಾರ್ಯಾಂಗಗಳು ರಾಜ್ಯ ಪಟ್ಟಿಗೆ ಸೇರುವ ವಿಷಯುಗಳಿಗೆ ಸಂಬಂಧಪಟ್ಟಂತೆ ಶಾಸಕೀಯ ಹಾಗೂ ಕಾರ್ಯಾಂಗದ ಕೆಲಸಗಳಲ್ಲಿ ಅತ್ಯುಚ್ಚ ಸಂಸ್ಥೆಗಳಾಗಬೇಕು.

ಕೆಲವು ಗೆಳೆಯರು ವಾದಿಸುವಂತೆ ಇದು "ಕೇಂದ್ರವನ್ನು ದುರ್ಬಲಗೊಳಿಸುವುದಿಲ್ಲ". ಕೇಂದ್ರ ಹಾಗೂ ರಾಜ್ಯ ಪಟ್ಟಿಗಳಿಗೆ ಸೇರುವ ವಿಷಯುಗಳ ಮೇಲೆ ಶಾಸಕೀಯ ಹಾಗೂ ಕಾರ್ಯಾಂಗದ ಅಧಿಕಾರದಲ್ಲಿ ಅನುಕ್ರಮವಾಗಿ ಕೇಂದ್ರ ಹಾಗೂ ರಾಜ್ಯಗಳು ಸರ್ವೋಚ್ಚ ಎಂಬ ಒತ್ತಡ ಪರಿಕಲ್ಪನೆಯ ಸತ್ವವನ್ನು ಇದರಿಂದ ಔಪಚಾರಿಕವಾಗಿ ನೆಲೆಗೊಳಿಸಿದಂತಾಗುತ್ತದಷ್ಟೆ. ಸಂವಿಧಾನದ ಒಕ್ಕೂಟ ಭಾವನೆಯನ್ನು ಉಲ್ಲಂಘಿಸಿ ಕೇಂದ್ರವು ತನ್ನ ಕೈಗೆ ತಗೊಂಡ ಅಧಿಕಾರಗಳನ್ನಷ್ಟೇ ಅದು ಕಳಕೊಳ್ಳುತ್ತದೆ. ಮೇಲೆ ವಿವರಿಸಿದ ರೀತಿಯಲ್ಲಿ ನನ್ನ ಸರಕಾರಗಳೊಡನೆ ವರ್ತಿಸಲು ಕೇಂದ್ರಕ್ಕೆ ಅವಕಾಶಮಾಡಿಕೊಟ್ಟ, ಅಧಿಕಾರವನ್ನು ಅದು ಕಳಕೊಂಡರೆ ಕೇಂದ್ರ 'ದುರ್ಬಲವಾಗುತ್ತದೆ' ಎಂದು ವಾದಿಸುವುದು ಯಾವ ರೀತಿಯ ಊಹೆಯಿಂದಲೂ ಸಾಧ್ಯವಿಲ್ಲ. ಸಂವಿಧಾನದ ಸದ್ಯದ ಕಲಮುಗಳನ್ನು ಎಲ್ಲಿಯವರೆಗೆ ಮುಂದುವರಿಯುತ್ತದೆಯೋ ಅಲ್ಲಿಯವರೆಗೆ ಇವೆಲ್ಲಾ ಪುನರಾವರ್ತನೆಗೊಳ್ಳಲಿಕ್ಕಿಲ್ಲ ಎಂಬ ಭರವಸೆ ಏನಾದರೂ ಇದೆಯೇ ?"

ಬೆಂಗಳೂರು

ಹತ್ತಿ ಗಿರಣಿ ಕಾರ್ಮಿಕರ ಹೋರಾಟಕ್ಕೆ ಜಯ

ಬೆಂಗಳೂರಿನಲ್ಲಿರುವ ಮೈಸೂರು ಮಿಲ್ಸ್ ಮತ್ತು ಮಿನರ್ವ ಮಿಲ್ಸ್ (ಎನ್. ಟಿ. ಸಿ.) ಕಾರ್ಮಿಕರಿಗೆ ತ್ರಿಪಕ್ಷೀಯ ಒಪ್ಪಂದದ ಪ್ರಕಾರ ಜುಲೈ 1 ರಿಂದ ಸಿಗಬೇಕಾಗಿದ್ದ 26 ರೂಪಾಯಿಗಳ ಹೆಚ್ಚಳವನ್ನು ಕೊಡಲು ಆಡಳಿತ ವರ್ಗ ನಿರಾಕರಿಸಿದ್ದನ್ನು ಪ್ರತಿಭಟಿಸಿ ಸಿ.ಐ.ಟಿ.ಯು. ಗೆ ಸೇರಿದ ಮೇಲ್ಕಂಡ ಎರಡೂ ಮಿಲ್ಲುಗಳ ಕಾರ್ಮಿಕರು ಸುಮಾರು 25 ದಿನಗಳ ಕಾಲ ಹೋರಾಟ ನಡೆಸಿದರು. ಇದರ ಪರಿಣಾಮವಾಗಿ ಆಡಳಿತ ವರ್ಗ ಒಪ್ಪಂಡವನ್ನು ಜಾರಿಗೊಳಿಸಲು ಒಪ್ಪಿಕೊಂಡಿದೆ.

2-10-83 ರಂದು ಎರಡೂ ಮಿಲ್ಲುಗಳ ಕಾರ್ಮಿಕ ಸಂಘದ ಕಾರ್ಯದರ್ಶಿಗಳು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಎರಡೂ ಸಂಘಗಳ ಅಧ್ಯಕ್ಷರಾಗಿರುವ ಕಾ. ವಿ. ಜೆ. ಕೆ. ನಾಯರ್ ಈ ಹೋರಾಟದ ನೇತೃತ್ವವನ್ನು ವಹಿಸಿದ್ದರು. ಕಾ. ಎ. ಪಿ. ನರಸಿಂಹನ್ ಜಂಟೀ ಹೋರಾಟದ ಸಂಚಾಲಕರಾಗಿದ್ದರು.

ಸುಳ್ಯದಲ್ಲಿ ಡಿ. ವೈ. ಎಫ್. ಐ. ಸಂಘಟನಾ ಸಮಿತಿ ರಚನೆ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ತಾಲ್ಲೂಕು ಮಟ್ಟದ ಯುವ ಜನರ ಸಭೆಯು ತಾರೀಖು 25-9-1983 ರಂದು ನ್ಯಾಯವಾದಿ ಕಾ॥ ಸೂರ್ಯನಾರಾಯಣ ಭಟ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ರೈತ ಸಂಘದ ಕಛೇರಿಯಲ್ಲಿ ಸೇರಿದ್ದ ಸಭೆಯನ್ನು ಕಾ॥ ಚೆನ್ನಪ್ಪ ಅವರು ಸ್ವಾಗತಿಸಿದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಕಾಮ್ರೇಡ್ ಎಂ. ಕೆ. ಭಟ್ ಅವರು ಯುವ ಜನತೆಯು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕಾಗಿ ಹೋರಾಡುವ ಅವಶ್ಯಕತೆಯನ್ನು ವಿವರಿಸಿದರು.

ತಾಲ್ಲೂಕಿನ ಮೂಲೆ ಮೂಲೆಗಳಲ್ಲಿ ಸಂಘಟನೆಯನ್ನು ಕಟ್ಟಿ ಬೆಳೆಸಲು ತೀರ್ಮಾನ ಮಾಡಿದ ಸಭೆಯು ನಲುವತ್ತು ಸದಸ್ಯರ ಒಂದು ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಿತು. ನಲುವತ್ತು ಸದಸ್ಯರ ಈ ಸಮಿತಿಗೆ ಕಾಮ್ರೇಡ್ ಪಿ.ಕೆ. ಮೂಸಾ ಅವರನ್ನು ಸಂಚಾಲಕರನ್ನಾಗಿಯೂ, ಕಾಮ್ರೇಡ್ ಡಿ. ರಾಘವ ಮತ್ತು ಕಾ॥ ಪಿ. ಕೃಷ್ಣ ಅವರುಗಳನ್ನು ಸಹ ಸಂಚಾಲಕರುಗಳನ್ನಾಗಿಯೂ ನೇಮಕ ಮಾಡಲಾಯಿತು. ಮುಂದೆ ಸದಸ್ಯತ್ವವನ್ನು ದೊಡ್ಡದಾಗಿ ಸೇರಿಸಿ ತಾಲ್ಲೂಕು ಸಮ್ಮೇಳನ ನಡೆಸಬೇಕೆಂದು ತೀರ್ಮಾನಿಸಲಾಯಿತು. ಕಾ॥ ಕೆ. ಮೋನಪ್ಪಗೌಡರು ವಂದನೆ ಸಲ್ಲಿಸಿದರು.

ಚನ್ನಸಂದ್ರದಲ್ಲಿ ರೈತ ಸಂಘದ ಸಭೆ

ದಿನಾಂಕ 2-10-1983 ರಂದು ಹೊಸಕೋಟೆ ತಾಲ್ಲೂಕು ಚನ್ನಸಂದ್ರದಲ್ಲಿ ರೈತ ಕಾರ್ಯಕರ್ತರ ಸಭೆ ನಡೆದು ಸಮಸ್ಯೆಗಳನ್ನು ಗುರುತಿಸಿ ಹೋರಾಟ ರೂಪಿಸಿಕೊಳ್ಳಲು ತೀರ್ಮಾನಿಸಲಾಯಿತು. ತಾಲ್ಲೂಕು ರೈತ ಸಂಘದ ಚಟುವಟಿಕೆಗಳನ್ನು ಕಾ॥ ಪ್ರಭುದೇವಯ್ಯನವರು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾ॥ ಆರ್. ಮನೋಹರ್‌ರವರು ವಹಿಸಿದ್ದರು. ಬೆಂಗಳೂರು ಜಿಲ್ಲಾ ಘಟಕದ ಕಾರ್ಯದರ್ಶಿ ಕಾ॥ ಲಕ್ಕಣ್ಣ ತಾಲ್ಲೂಕಿನ ಸಮಸ್ಯೆಗಳನ್ನು ಕುರಿತು ಮಾತನಾಡಿದರು.

ದಿನಾಂಕ 24-10-1983 ರಂದು ಹೊಸಕೋಟೆ ತಾಲ್ಲೂಕು ಕಚೇರಿಯ ಮುಂದೆ ರೈತ ಸಂಘದ ಬೇಡಿಕೆಗಳಿಗಾಗಿ ಪ್ರದರ್ಶನ ನಡೆಸಲು ತೀರ್ಮಾನಿಸಲಾಗಿದೆ.

ಪ್ರಜಾಸತ್ತೆಗಾಗಿ ಆಂದೋಲನ

ಪಾಕಿಸ್ತಾನೀ ಪತ್ರಿಕೆಗಳ ಬಾಯಿ ಮುಚ್ಚಿಸಲು ಯತ್ನ

ಪಾಕಿಸ್ತಾನದ ಮಿಲಿಟರಿ ಸರಕಾರದ ವಿರುದ್ಧ ಹಾಗೂ ಪ್ರಜಾಪ್ರಭುತ್ವದ ಪುರ್‌ನಸ್ಥಾಪನೆಗಾಗಿ ನಡೆದಿರುವ ಅಂಧೋಲನ ಸೆಪ್ಟಂಬರ್ 23 ಕಂದು 40ನೇ ದಿನಕ್ಕೆ ಕಾಲಿಟ್ಟಿತು. ಈಗ ಅದು ಬಲಗೂಡಿಸಿಕೊಂಡು ಮುಂದುವರಿಯುತ್ತಿದೆ. ಸಿಂಧ್‌ನಲ್ಲಿ ಪ್ರದರ್ಶನಕಾರರ ವಿರುದ್ಧ ಲಾಠಿ ಪ್ರಹಾರ ನಡೆಸಿದ ಒಬ್ಬ ಪೋಲೀಸ್ ಅಧಿಕಾರಿಯನ್ನು ತಮಗೊಪ್ಪಿಸಬೇಕೆಂದು ಒತ್ತಾಯಿಸಿ ಸಾವಿರಾರು ಜನ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದರೆಂದು ತಿಳಿದು ಬಂದಿದೆ. ಪೋಲೀಸರ ಗೋಳಿಬಾರಿನಿಂದ ಇಬ್ಬರು ಮೃತರಾದರು. ಇದುವರೆಗೆ ಈ ಆಂಧೋಲನದಲ್ಲಿ 40 ಕ್ಕೂ ಹೆಚ್ಚು ಜನ ಆಹುತಿಯಾಗಿದ್ದಾರೆ ಹಾಗೂ ನೂರಾರು ಜನ ಬಂಧಿತರಾಗಿದ್ದರೆ ಎಂದು ಪಾಕಿಸ್ತಾನದ ವಿರೋಧ ಪಕ್ಷಗಳ ಮೂಲದಿಂದ ತಿಳಿದುಬಂದಿದೆ.

ಈ ಮಧ್ಯೆ ಸಿಂಧ್ ಹಾಗೂ ಪಂಜಾಬಿನಲ್ಲಿ ಅನುಕ್ರಮವಾಗಿ ಸೆಪ್ಟಂಬರ್ 28 ಹಾಗೂ 29 ರಂದು ಮುನಿಸಿಪಲ್ "ಚುನಾವಣೆ" ನಡೆಸಲು ಜಿಯಾ ಸರಕಾರ ನಿರ್ಧರಿಸಿದೆ. ಆದರೆ ಪಾಕಿಸ್ತಾನದ ಎಲ್ಲಾ ವಿರೋಧ ಪಕ್ಷಗಳ ಮೇಲೆ ನಿಷೇಧವಿರುವುದರಿಂದ ಈ ಪಕ್ಷಗಳೊಂದಿಗೆ ಸಂಬಂಧವಿರುವ ಯಾರೂ ಕೂಡಾ ಇದರಲ್ಲಿ ಭಾಗವಹಿಸುವಂತಿಲ್ಲ. ಪಾಕಿಸ್ತಾನದ ವಿರೋಧ ಪಕ್ಷಗಳು ಇದಕ್ಕೆ ಬಹಿಷ್ಕಾರ ಹಾಕಿ ಆ ಎರಡು ದಿನ ಸಾರ್ವತ್ರಿಕ ಮುಷ್ಕರ ನಡೆಸಲು ನಿರ್ಧರಿಸಿವೆ.

ಈ ದಿನ ದೇಶಾದ್ಯಂತ ವ್ಯಾಪಕ ಪ್ರತಿಭಟನಾ, ಮೆರವಣಿಗೆಗಳು ನಡೆದ ಸುದ್ದಿ ಬಂದಿದೆ. ಆಂಧೋಲನ ತುಂಬಾ ಬಲವಾಗಿರುವ ಸಿಂಧ್ ಪ್ರಾಂತ್ಯದಲ್ಲಿ ಕಟ್ಟುನಿಟ್ಟಾದ ಸೆನ್ಸಾರನ್ನು ಪತ್ರಿಕೆಗಳ ಮೇಲೆ ಹೇರಲಾಗಿದೆ.

ನಾಗರಿಕರ ನಡುವೆ ಮಾತ್ರವಲ್ಲ, ಸೈನಿಕ ಸಿಬ್ಬಂದಿಯ ನಡುವೆಯೂ ಅತೃಪ್ತಿ ಬೇಗನೆ ವ್ಯಾಪಕಗೊಳ್ಳುತ್ತಿದೆ. ಪರ್ಷಿಯಾ ಕೊಲ್ಲಿಯ ರೇವುಪಟ್ಟಣಗಿನ್ನಿಯನ್ನು ಅಮೇರಿಕಕ್ಕೆ ಮಿಲಿಟರಿ ನೆಲೆ ಸ್ಥಾಪಿಸಲು ಒದಗಿಸಿಕುವುದರ ವಿರುದ್ಧ ಪ್ರತಿಭಟನೆ ವ್ಯಕ್ತವಾಗಿದೆ. ರಿಸಾಲ್‌ಪುರದ ವಿಮಾನ ನೆಲೆಯ ವೈಮಾನಿಕ ಪಡೆಯ ಅಧಿಕಾರಿಗಳಲ್ಲೂ ಈ ಬಗ್ಗೆ ಅಸಂತೃಪ್ತಿ ಕಂಡುಬಂದಿದೆ.

ಈ ನಡುವೆ ಸೆಪ್ಟಂಬರ್ 30 ರಂದು ಅಮೇರಿಕಾದ ರಕ್ಷಣಾ ಕಾರ್ಯದರ್ಶಿ ಪಾಕಿಸ್ತಾನಕ್ಕೆ ಭೇಟಿ ಕೊಡಲಿದ್ದಾರೆ. ಇದನ್ನು ಕುರಿತ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ಜಿಯಾ ಅವರು ಅಮೇರಿಕಾದ ಸೈನಿಕ ನೆರವಿಗಾಗಿ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ. —

ಐದನೇ ತಿಂಗಳಿನಲ್ಲಿ ಕಾಲಿಟ್ಟಿರುವ ಸುಂದತ್ರಾ ಲಾಕೌಟ್

ಜೂನ್ 4ರಂದು ಘೋಷಿತಗೊಂಡ ಹುಬ್ಬಳ್ಳಿಯ ಸುಂದತ್ರಾ ಕಂಪನಿಯ ಲಾಕೌಟ್ ಈಗ ಐದನೇ ತಿಂಗಳಿನಲ್ಲಿ ಕಾಲಿಟ್ಟಿದೆ. ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ ಲಾಔಟ್ ಮತ್ತು ಕ್ಲೋಜರುಗಳ ರೂಪದಲ್ಲಿ ಬಂಡವಾಳಶಾಹಿ ವರ್ಗದ ಅಕ್ರಮಣ ಹೆಚ್ಚಾಗುತ್ತಿದೆಯೆಂದೂ, ದೀರ್ಘಕಾಲದ ಲಾಕೌಟುಗಳ ಮೂಲಕ ಕಾರ್ಮಿಕರನ್ನು ಉಪವಾಸ ಕೆಡವಿ ದಣಿಸಿ ಶರಣು ಬರುವಂತೆ ಮಾಡುವದರಲ್ಲಿ ಸರಕಾರದ ಕ್ರಿಯಾಶೀಲ ಸಹಕಾರವೂ ಇದೆ ಎಂಬುದು ಸಿ. ಐ. ಟಿ. ಯು. ವಿನ ತಿಳುವಳಿಕೆ. ಸುಂದತ್ರಾದ 126 ದಿನದ ಲಾಔಟ್ ಸಾಕಾರ ಉದಾಹರಣೆ. ಸುಂದತ್ರಾ ಕಾರಖಾನೆಯಲ್ಲಿ ಸಿ.ಐ.ಟಿ.ಯು ನೇತೃತ್ವದ ಕಾರ್ಮಿಕ ಸಂಘ ಬರುವುದಕ್ಕೆ ಹಿಂದಿನ ಎಲ್ಲಾ ಹೋರಾಟಗಳನ್ನು ವಿಫಲಗೊಳಿಸಿದ ಮಾಲೀಕರ ವರ್ಗ ಈ ಕಾರ್ಮಿಕ ಸಂಘದ ಹೋರಾಟವನ್ನು ಮುರಿಯಲು ಎಲ್ಲಾ ಪ್ರಯತ್ನ ಮಾಡುತ್ತಿದೆ.

2-8-83 ರಿಂದ ಲಾಕೌಟ್ ತೆಗೆದಿರುವುದಾಗಿ ಘೋಷಿಸಿದ ಮಾಲೀಕವರ್ಗ ವೈಯುಕ್ತಿಕ ಕರಾರು ಪತ್ರಕ್ಕೆ ಸಹಿ ಹಾಕಿ ಕೆಲಸಕ್ಕೆ ಹಾಜರಾಗಬೇಕೆಂದು ಆಕ್ರಮವಾದ ಹೂಡಿದೆ. ಇದರಲ್ಲಡಗಿರುವ ಅಪಾಯವನ್ನು ಕಂಡು ಯಾವ ಕಾರ್ಮಿಕನೂ ಹಾಜರಾಗಲಿಲ್ಲ. ವಿಧಾನ ಸಭೆಯಲ್ಲಿ ಸೂರಿಯವರುಎತ್ತಿದಪ್ರಶ್ನೆಗೆ ತೀವ್ರ ಕ್ರಮ ಕೈಗೊಳ್ಳುತ್ತೇವೆಂದು ತಿಳಿಸಿದ ಸರಕಾರ ಯಾವ ಕ್ರಮವನ್ನು ಕೈಗೊಂಡಿಲ್ಲ. ಮಾಲೀಕ ವರ್ಗ ಮಾತುಕತೆಯೆಂಬ ನಾಟಕದ ಮೂಲಕ ಪರಿಹಾರವನ್ನು ವಿಳಂಬಗೊಳಿಸುವ ಪ್ರಯತ್ನದ ಬಗ್ಗೆ ಕಾರ್ಮಿಕರಿಗೆ ಅರಿವಾಗಿದೆ. ಜನತಾ ಸರ್ಕಾರದ ಕಾರ್ಮಿಕ ನೀತಿ ಹಿಂದಿನ ಸರಕಾರದ ನೀತಿಗಿಂತ ಭಿನ್ನವಲ್ಲವೆಂಬುದೂ ಅರಿವಾಗಿದೆ.

ಕಾರ್ಮಿಕರ ಹೋರಾಟ ಮಾತ್ರ ಮುಂದುವರೆದಿದ್ದು ಅವರ ಐಕ್ಯಶಕ್ತಿಯೊಂದೇ ದಾರಿ ಎಂಬ ಭಾವನೆಯನ್ನು ಗಟ್ಟಿಗೊಳಿಸುತ್ತಿದೆ. ದಿ॥ 20-9-83 ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಸಂಘದ ಅಧ್ಯಕ್ಷ ಕಾ. ವ್ಹಿ. ಜೆ. ಕೆ. ನಾಯರ್ ಮತ್ತು ಸಂಘಟನಾ ಕಾರ್ಯದರ್ಶಿ ಕಾ. ಸುಧೀಂದ್ರ ಅವರು ಮಾತನಾಡಿ, ಸುಂದತ್ರಾ ಆಡಳಿತವನ್ನು ಸರಕಾರವೇ ವಹಿಸಿಕೊಳ್ಳಬೇಕು ಎಂಬ ನಿರ್ಣಯವನ್ನು ಮುಂದಿಟ್ಟಾಗ ಅದನ್ನು ಸಭೆಯು ಸರ್ವಾನುಮತದಿಂದ ಸ್ವೀಕರಿಸಿತು. ದಿ॥ 28 ಸೆಪ್ಟಂಬರ್ ರಂದು ಹಳೇ ಹುಬ್ಬಳ್ಳಿಯಲ್ಲಿ ಸುಂದತ್ರಾ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ಈ ನಿರ್ಣಯವನ್ನು ಸಾರ್ವಜನಿಕರ ಮಧ್ಯೆ ಪ್ರಚಾರಗೊಳಿಸಿದರು. ಅಂದು ಸಂಜೆ ನಡೆದ ಜಂಟೀ ಕ್ರಿಯಾ ಸಮಿತಿಯ ಬಹಿರಂಗ ಸಭೆಯಲ್ಲಿ ಕಾ. ಸುಧೀಂದ್ರ, ಕಾ. ಆರ್. ಬಿ. ಸ್ವಾದಿ, ಕಾ. ಶಿರಪೂರ ಮತ್ತು ಕಾ. ಸೋಮಪುರ ಮಯತನಾಡಿದರು. ದಿ॥ 1-10-83 ರಂದು ಮುಖ್ಯಮಂತ್ರಿಗಳು ಹುಬ್ಬಳ್ಳಿಗೆ ಭೇಟಿಯಿತ್ತಾಗ ನೂರಾರು ಕಾರ್ಮಿಕರ ಮೆರವಣಿಗೆ ಹೊರಡಿಸಿ ಅವರಿಗೆ ಮನವಿ ಅರ್ಪಿಸಲಾಯಿತು. ಮರುದಿನ ಉದ್ಯೋಗ ಮಂತ್ರಿ ಶ್ರೀ ಎಸ್. ಆರ್. ಬೊಮ್ಮಾಯಿ ಅವರ ಮನೆಗೆ ಮೆರವಣಿಗೆ ಹೊರಡಿಸಿ ಅವರನ್ನು ಭೇಟಿ ಮಾಡಲಾಯಿತು. ಕಾ. ತಳವಾರ, ಗಾಂವಕರ, ನಾಯಿಕ, ವಿಶ್ವಾಸ ವಿಲ್ಸನ್ ಮತ್ತು ಸುಧೀಂದ್ರ ಅವರು ಸರಕಾರದ ವಿಳಂಬ ನೀತಿಯನ್ನು ಬಲವಾಗಿ ಖಂಡಿಸಿದರು. ಒಟ್ಟಿನಲ್ಲಿ ಹುಬ್ಬಳ್ಳಿ - ಧಾರವಾಡದ ಕಾರ್ಮಿಕ ಜನತೆ ಸುಂದತ್ರಾ ಕಾರ್ಮಿಕರ ಹೋರಾಟಕ್ಕೆ ಸಹಾಯ–ಸಹಕಾರ ನೀಡುವುದಲ್ಲದೇ ಅದರ ಶೀಘ್ರ ಯಶಸಿಗಾಗಿ ಹಾರೈಸುತ್ತಿದ್ದಾರೆ. —

ಬೆಂಗಳೂರು

ಬೆಲೆ ಏರಿಕೆ ವಿರುದ್ಧ ಮೆರವಣಿಗೆ

14-10-83ರಂದು ಬೆಂಗಳೂರಿನಲ್ಲಿ ಸಿ. ಪಿ. ಐ. (ಎಂ.)ನ ಶ್ರೀರಾಮಪುರಂ ಸ್ಥಳೀಯ ಸಮಿತಿಯ ಆಶ್ರಯದಲ್ಲಿ ಬೆಲೆಯೇರಿಕೆಯ ವಿರುದ್ಧ ಮೆರವಣಿಗೆ ನಡೆಸಲಾಯಿತು. ನಂತರ ಆಹಾರ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಮನವಿಯನ್ನು ಅರ್ಪಿಸಲಾಯಿತು. ನಿಯೋಗದಲ್ಲಿ ಕಾ. ಪಿ. ಕೆ. ಸುಬ್ರಮಣಿ ದೇವರಾಜ್, ಶಂಕರನಾರಾಯಣ್, ಸುಬ್ಬಯ್ಯ ಅವರುಗಳು ಒಳಗೊಂಡಿದ್ದರು. —

ಬೀಡಿ ಮಜೂರರ ಸಭೆ

ಗುರುಪುರ ಸುರತ್ಕಲ್ ಬೀಡಿ ಲೇಬರ್ ಯೂನಿಯನಿನ ಆಶ್ರಯದಲ್ಲಿ ತಾ॥ 18–9–1983 ರಂದು ಗಂಜೀಮಠದಲ್ಲಿ ಮಳಲಿ ಪ್ರದೇಶ ಬೀಡಿ ಮಜೂರರ ಸಭೆಯು ಜರಗಿತು. ಸಭೆಯ ಅಧ್ಯಕ್ಷತೆಯನ್ನು ಕಾ. ವಾಸು ಶೆಟ್ಟಿಯವರು ವಹಿಸಿದರು. ಯೂನಿಯನಿನ ಕಾರ್ಯದರ್ಶಿ ಕಾ. ಹೊನ್ನಯ್ಯ ಸಭೆಯನ್ನು ಸ್ವಾಗತಿ ಬೀಡಿ ಮಜೂರ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಜಿಲ್ಲಾ ಬೀಡಿ ಫೆಡರೇಶನಿನ ಕಾರ್ಯದರ್ಶಿ ಸಭೆಯಲ್ಲಿ ಮಾತನಾಡುತ್ತಾ ಇತ್ತೀಚಿಗೆ ನಡೆದ ಒಪ್ಪಂದದ ಶರತ್ತುಗಳನ್ನು ವಿವರಿಸಿ ಇನ್ನು ಕೂಡಾ ಗ್ರಾಮಾಂತರ ಪ್ರದೇಶಹಲ್ಲಿ ಕಂಟ್ರಾಕ್ಟ್‌ದಾರರು ಇದನ್ನು ಜಾರಿಗೊಳಿಸುವ ಬಗ್ಗೆ ಮಾಡುವ ಕಿರುಕುಳವನ್ನು ಮನದಟ್ಟು ಮಾಡಿ, ಕಂಟ್ರಾಕ್ಟ್‌ದಾರರ ಈ ಶೋಷಣೆಯನ್ನು ತಪ್ಪಿಸಲು ಮಜೂರರು ತಮ್ಮ ಸಂಘಟನೆಯನ್ನು ಬಲಪಡಿಸಿ ಈ ಮಧ್ಯವರ್ತಿಯನ್ನು ಹೋಗಲಾಡಿಸಲು ನಾವು ಪ್ರಯತ್ನಿಸಬೇಕೆಂದರು.

ಸಭೆಯಲ್ಲಿ ಬೆಲೆಯೇರಿಕೆಯನ್ನು ತಡೆಗಟ್ಟಲು ಸರಕಾರ ಕೂಡಲೆ ಕ್ರಮವಹಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಉಡುಪಿ

ಕಾರ್ಮಿಕನ ವಜಾ— ಪ್ರತಿಭಟನೆ

ಉಡುಪಿಯ ಗಣೇಶ ಪ್ರಿಂಟರ್ಸ್‌ನಲ್ಲಿ ಪ್ರಿಂಟರ್ ಆಗಿದ್ದ ಶ್ರೀ ಅಜಿತ್‌ಕುಮಾರ್ ಎಂಬ ಕಾರ್ಮಿಕನನ್ನು ಮಾಲಿಕರು 6–9–1983 ರಂದು ವಜಾ ಮಾಡಿರುವುದನ್ನು ಪ್ರತಿಭಟಿಸಿ ಆ ಪ್ರೆಸ್ಸಿನ ನೌಕರರು ದಿನಾಂಕ 7–9–1983 ರಿಂದ ಮುಷ್ಕರದಲ್ಲಿದ್ದಾರೆ. ಈ ಮುಷ್ಕರವನ್ನು ಬೆಂಬಲಿಸಿ, ಮಾಲಿಕರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಉಡುಪಿಯ ಸಂಯುಕ್ತ ಕಾರ್ಮಿಕ ಕ್ರಿಯಾವೇದಿಕೆಯ ನೇತೃತ್ವದಲ್ಲಿ ಹಂಚು, ಬೀಡಿ, ನೇಯ್ಗೆ, ನರಗಸಭೆ, ಕೃಷಿ, ಬ್ಯಾಂಕುಗಳು, ಜೀವವಿಮಾ ಮುಂತಾದ ಕೈಗಾರಿಕೆಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು 23–9–1983 ರಂದು ಗಣೇಶ ಪ್ರಿಂಟರ್ಸ್ ಮುಂದುಗಡೆ ಮತಪ್ರದರ್ಶನ ನಡೆಸಿದರು. ಮತ ಪ್ರದರ್ಶನದ ಅನಂತರ ಕಾರ್ಮಿಕರು ಉಡುಪಿ ನಗರದ ಮುಖ್ಯ ಬೀದಿಗಳಲ್ಲಿ ಪ್ರೆಸ್ ನೌಕರರ ಹೋರಾಟಕ್ಕೆ ಬೆಂಬಲದ ಘೋಷಣೆಗಳೊಂದಿಗೆ ಮೆರವಣಿಗೆ ಮಾಡಿದರು. ಪಿ. ವಿಶ್ವನಾಥರೈಯವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಹೆಗ್ಗಡದೇವನಕೋಟೆ

ಹಸಿರು ರುಮಾಲಿನ ನಡುವೆ ಎದ್ದ ಕೆಂಬಾವುಟ !

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯ ತಾಲೂಕು ಕಛೇರಿ ಪಠಾರದಲ್ಲಿ 11-10-1983ರಂದು ಎಲ್ಲೆಲ್ಲೂ ಕೆಂಬಾವುಟ ಹಾರಾಡುತ್ತಿದ್ದವು. ಪ್ರಾಂತ ರೈತ ಸಂಘದ ಆಶ್ರಯದಲ್ಲಿ ರೈತ, ಕೃಷಿ ಕಾರ್ಮಿಕರ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಕರ್ನಾಟಕ, ಕೇರಳ ರಾಜ್ಯದ ಗಡಿ ಪ್ರದೇಶದ ಹೆಗ್ಗಡದೇವನ ಕೋಟೆಯಲ್ಲಿ ಶ್ರೀಮಂತ ರೈತರು ಹಸಿರು ರುಮಾಲು ದಾರಿಗಳಾಗಿ ರುದ್ರಪ್ಪನವರ "ರೈತ ಸಂಘ"ದಲ್ಲಿ ಸಂಘಟಿತರಾಗಿ ಪ್ರತೀ ಹಳ್ಳಿಯ ದ್ವಾರದಲ್ಲಿ. ಕಣ್ಣಿಗೆ ರಾಚುವಂತಹ ದೊಡ್ಡ ಗಾತ್ರದ ಹಸಿರು ಬೋರ್ಡ್‌ಗಳನ್ನು ಹಾಕಿದ್ದರೆ, ಇನ್ನೊಂದೆಡೆ ಬಹು ಸಂಖ್ಯೆಯಲ್ಲಿರುವ ಬಡ, ಮಧ್ಯಮ ರೈತರು, ಕೃಷಿ ಕಾರ್ಮಿಕರು ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಸಂಘಟಿತರಾಗುತ್ತಿದ್ದು ಕೆಂಬಾವುಟವನ್ನು ಎತ್ತಿ ಹಿಡಿದಿದ್ದಾರೆ. ತೀವ್ರ ಬಡತನದ ಬೇಗೆಯಿಂದ ನರಳುತ್ತಾ, ಭೂ ಮಾಲಿಕರುಗಳ ದಬ್ಬಾಳಿಕೆಯ ಬೆದರಿಕೆಯಲ್ಲಿ ಜೀವನ ಸಾಗಿಸುತ್ತಿರುವ ಬಡ ರೈತರು ಕೆಂಬಾವುಟದಡಿಯಲ್ಲಿ ಹೋರಾಟ ನಡೆಸಲು ನಿರ್ಧರಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರ ರಾವ್‌ರವರು ಸಭೆಯಲ್ಲಿ ಮುಖ್ಯ ಭಾಷಣಮಾಡಿ ರೈತರು ಸಂಟಿತರಾಗಲು ಕರೆ ನೀಡಿದರು. ಮೈಸೂರು ಜಿಲ್ಲಾ CITU ಅಧ್ಯಕ್ಷರಾದ ಕಾಂ. ಎಂ. ಎನ್. ಉಗ್ರಪ್ಪ, ದಲಿತ ಸಂಘರ್ಷ ಸಮಿತಿಯ ಹರಿಹರನಂದಸ್ವಾಮಿ, ಬೆಟ್ಟಯ್ಯರವರುಗಳು ಸಭೆಯಲ್ಲಿ ಮಾತನಾಡಿದರು. ತಾಲೂಕು ರೈತ ಸಂಘದ ಕಾರ್ಯದರ್ಶಿ ಕಾಂ. ಪರಂದಾಮನ್ ರವರು ಅಧ್ಯಕ್ಷತೆ ವಹಿಸಿದ್ದರು. 11 ದಿನ ಕಾಲ ಮುಖ್ಯ ರೈತ ಕಾರ್ಯಕರ್ತ ರೊಡನೆ ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ತಿರುಗಾಡಿ ಸಂಘಟನೆ ಕೆಲಸ ನಿರ್ವಹಿಸಿದ್ದ ಕಾಂ. ಅಣ್ಣಪ್ಪ ರವರು ಸಭೆಗೆ ಸ್ವಾಗತ ಕೋರಿದರು. ಕಾಂ. ನಟರಾಜ್ ಧನ್ಯವಾದ ಸಲ್ಲಿಸಿದರು. —

ಪುತ್ತೂರು ತಾಲ್ಲೂಕು ರೈತ ಕಾರ್ಯಕರ್ತರ ಶಿಬಿರ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಬಜತ್ತೂರು ಗ್ರಾಮದಲ್ಲಿ ರೈತ ಸಂಘದ ತಾಲೂಕು ಮಟ್ಟದ ರೈತ ಕಾರ್ಯಕರ್ತರ ಎರಡು ದಿನಗಳ ತರಬೇತಿ ಶೀಬಿರವು ಸೆಪ್ಟೆಂಬರ್ 19 ಮತ್ತು 20 ರಂದು ಯಶಸ್ವಿಯಾಗಿ ನಡೆಯಿತ್ತು. ಅರವತ್ತು ಜನ ಭಾಗವಹಿಸಿದ್ದ ಶಿಬಿರದಲ್ಲಿ ಶ್ರೀ ಎಂ. ಕೆ. ಭಟ್ ರೈತ ಸಂಘ ಕುರಿತಂತೆ ತರಗತಿಗಳನ್ನು ನಡೆಸಿದರು.

ಗ್ರಾಮೀಣ ಪರಿಸ್ಥಿತಿ, ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆ, ರೈತ ಸಂಘದ ಧ್ಯೇಯ ಧೋರಣೆಗಳು, ಕಾರ್ಮಿಕ ವರ್ಗ ಮತ್ತು ರೈತರ ಸಖ್ಯತೆ, ಹಳ್ಳಿಯಲ್ಲಿರುವ ವರ್ಗಗಳು ಮತ್ತು ಸಂಘಟನೆ ಹಾಗೂ ಹೋರಾಟಗಳನ್ನು ಕಟ್ಟಿ ಬೆಳೆಸುವ ವಿಧಾನ ಇವೇ ಮೊದಲಾದವುಗಳ ಕುರಿತು ತಮ್ಮ ಒಂದೂವರೆ ದಿನಗಳ ಪಾಠಗಳಲ್ಲಿ ಕಾಮ್ರೆಡ್ ಎಂ.ಕೆ. ವಿವರಿಸಿದರು. ಅನೇಕ ಕಾರ್ಯಕರ್ತರು ತಮ್ಮ ಅನುಭವಗಳನ್ನು ವಿವರಿಸಿದರು. ಶಿಬಿರದ ವ್ಯವಸ್ಥೆಯನ್ನು ಬಜತ್ತೂರು ರೈತರ ಸಂಘದ ಶಾಖೆಯು ವಹಿಸಿಕೊಂಡಿತ್ತು. —

ಸುದ್ಧಿ ಸಂಗ್ರಹ

ಅಣು ಇಂಧನ ಪೂರೈಸಲು ಫ್ರೆಂಚರ ಹಿಂದೇಟು

ಫ್ರೆಂಚರ ಸಹಾಯದೊಂದಿಗೆ ಕಲ್ಪಕ್ಕಂನಲ್ಲಿ ನಿರ್ಮಾಣಗೊಂಡಿರುವ ಮೊದಲ ಪ್ರಾಯೋಗಿಕ ಫಾಸ್ಟ್ ಬ್ರೀಡರ್ ಅಣುಸ್ಥಾವರಕ್ಕೆ ಅಣುಇಂಧನ ಪೂರೈಸಲು ಫ್ರಾನ್ಸ್ ಈಗ ಹಿಂದೇಟು ಹಾಕುತ್ತಿದೆ. ಇದರಿಂದಾಗಿ ಈ ಸ್ಥಾವರ ಪ್ರಾರಂಭವಾಗುವುದು ದುಸ್ತರವಾಗಿದೆ ಎಂದು ವರದಿಯಾಗಿದೆ.

ಪ್ಯಾರಿಸ್ಸಿನಲ್ಲಿ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ಫ್ರೆಂಚ್ ಅಧ್ಯಕ್ಷ ಮಿತ್ತೆರಾಂದ್ ಅವರನ್ನು ಭೇಟಿಯಾಗಿದ್ದಾಗ ಅಧ್ಯಕ್ಷರು ಭಾರತದ ನಾಗರಿಕತೆಯ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿ ವಿವಿಧ ಕ್ಷೇತ್ರಗಳಲ್ಲಿ ಭಾರತದೊಂದಿಗೆ ನಿಕಟ ಸಹಕಾರದಿಂದ ದುಡಿಯುವ ಫ್ರಾನ್ಸ್‌ನ ಹಿರಿಯಾಸೆಯನ್ನು ವ್ಯಕ್ತಪಡಿಸಿದ್ದಾರೆಂದೂ ತಿಳಿದು ಬಂದಿದೆ.

ಬ್ಯಾಂಕುಗಳು ಆರ್ಥಿಕ ಕರೆವೆಣ್ಣುಗಳು

ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಖಾಸಗೀ ವಲಯದ ಕೊಬ್ಬು ಬೆಳೆಸುತ್ತಿರುವ ರಾಷ್ಟ್ರೀಕೃತ ಬ್ಯಾಂಕುಗಳು ಖಾಸಗೀವಲಯದ "ಆರ್ಥಿಕ ಕರೆವೆಣ್ಣು"ಗಳೇನು ಎಂದು ನ್ಯಾಯಮೂರ್ತಿ ವಿ. ಕೆ. ಕೃಷ್ಣ ಅಯ್ಯರ್ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಅವರು ರಾಷ್ಟ್ರೀಕೃತ ಬ್ಯಾಂಕೊಂದರ ಅಧಿಕಾರಿಗಳ ಸಂಘ ಮದ್ರಾಸಿನಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಿದ್ದರು.

ಅಸ್ಸಾಂ ಚಳುವಳಿಯಲ್ಲಿ ಒಡಕು?

ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (AASU)ದ ಉಪಾಧ್ಯಕ್ಷ ನೂರುಲ್ ಹುಸೇನ್ ಅವರನ್ನು ಸಂಘದ ಪ್ರಾಥಮಿಕ ಸದಸ್ಯತ್ವದಿಂದ ಕಿತ್ತು ಹಾಕಲಾಗಿದೆಯೆಂದು ವರದಿಯಾಗಿದೆ.

ಹುಸೇನ್ ಅವರನ್ನು ವಿಧಾನಸಭೆಯ ಚುನಾವಣೆಯನ್ನು ಬಹಿಷ್ಕರಿಸುವ ಸಂಘದ ಕಾರ್ಯಕ್ರಮದ ನಂತರ ಅಮಾನತು ಗೊಳಿಸಲಾಗಿತ್ತು. ಬಹಿಷ್ಕಾರದ ಕಾರ್ಯಕ್ರಮಕೋಮು ಘರ್ಷಣೆಯ ಸ್ವರೂಪ ತಳೆದುದರಿಂದ ಕುಪಿತರಾದ ಸಂಘದ ಮುಸ್ಲಿಂ ಸದಸ್ಯರ ಸಭೆಯೊಂದನ್ನು ಏರ್ಪಡಿಸುದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿತ್ತು. ಹುಸೇನ್ ಇದು ತಪ್ಪು ಎಂದು ಒಪ್ಪಿಕೊಳ್ಳಲು ಸಿದ್ಧರಾಗಲಿಲ್ಲ. ಸಭೆಯಲ್ಲಿ ಹಾಜರಿದ್ದ ಇತರ ಸದಸ್ಯರ ಮೇಲೂ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಸಂಘದ ಪ್ರಧಾನ ಕಾರ್ಯದರ್ಶಿ ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಅಸ್ಸಾಂನಲ್ಲಿ ಹಲವೆಡೆ ಸಾಮೂಹಿಕ ನರಹತ್ಯೆಗೆ ಕಾರಣವಾದ ಸಂಘದ ವಿಭಾಗವೊಂದರ ಮೇಲೆ ಇಂತಹ ಕ್ರಮ ಕೈಗೊಂಡಿಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ವಿಭಾಗಕ್ಕೆ ಆರ್. ಎಸ್. ಎಸ್.ನೊಂದಿಗೆ ನೇರ ಸಂಪರ್ಕವಿತ್ತು.

ಸಂಘದ ಈ ಕ್ರಮದಿಂದ ಚಳುವಳಿಯಲ್ಲಿ ಒಡಕು ಇನ್ನಷ್ಟು ಹೆಚ್ಚಬಹುದೆಂದು ಭಾವಿಸಲಾಗುತ್ತಿದೆ. ಈ ರೀತಿ ಒಡಕು ಬಂದರೆ ಅದಕ್ಕೆ ಸಂಘವೇ ಹೊಣೆಯೆಂದು ನೂರುಲ್ ಹುಸೇನ್ ಹೇಳಿದ್ದಾರೆ.

ಕರುಣಾಕರನ್ ವಿರುದ್ಧ ಬಂಡಾಯ

ಕೇರಳದ ಕಾಂಗ್ರೆಸ್ (ಐ) ಸದಸ್ಯರ 'ಸಮಾಜವಾದೀ ಸಾಂಸ್ಕೃತಿಕ ರಂಗ'ದ ಪ್ರಥಮ ಸಮಾವೇಶ ಕೊಚ್ಚಿಯಲ್ಲಿ ನಡೆದು ಅದರಲ್ಲಿ ಪಕ್ಷ 'ಕೋಮುವಾದೀ ಹಾಗೂ ಜಾತೀವಾದಿ' ಪಕ್ಷಗಳ ಸಂಯುಕ್ತ ರಂಗದಿಂದ ಹೊರಬರಬೇಕೆಂದು ಒತ್ತಾಯಿಸಲಾಗಿದೆ. ಕೇರಳ ಹಾಗೂ ಅದರ ಹಿತಾಸಕ್ತಿಯನ್ನು ಕಾಪಾಡಲು ಪಕ್ಷದ ನಾಯಕತ್ವ ಈ "ಚಾರಿತ್ರಿಕ ಕರ್ತವ್ಯ" ನಿರ್ವಹಿಸಬೇಕೆಂದು ಸಮಾವೇಶದ ರಾಜಕೀಯ ನಿರ್ಣಯ ಹೇಳಿದೆ.

ಕೊಳೆಗೇರಿಗಳ ಸಂಖ್ಯೆ ಏಷ್ಯಾದಲ್ಲಿ ಏರುತ್ತಿದೆ

ಏಷ್ಯಾ ಹಾಗೂ ಪ್ಯಾಸಿಫಿಕ್ ಪ್ರದೇಶಗಳ ನಗರಗಳಲ್ಲಿ ಮೂವತ್ತು ಶೇಕಡಾದಷ್ಟು ಜನ ಕೊಳೆಗೇರಿಗಳಲ್ಲಿ ವಾಸಿಸಬೇಕಾಗಿ ಬಂದಿದೆ, ಈ ಶತಕದ ಕೊನೆಯಲ್ಲಿ ಇದು ಇಮ್ಮಡಿಯಾಗಬಹುದು. ಜನರ ವಸತಿಯ ಪರಿಸ್ಥಿತಿ ಸುಧಾರಿಸದೇ ಹೋದಲ್ಲಿ ಸಮಸ್ಯೆ ಇನ್ನಷ್ಟು ಜಟಿಲಗೊಳ್ಳಬಹುದು. ಹೀಗೆಂದು ಏಷ್ಯಾ ಹಾಗೂ ಪ್ಯಾಸಿಫಿಕ್ ಪ್ರದೇಶದ ಸಂಘಟನೆಯ ಕಾರ್ಯದರ್ಶಿಯವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಭಾರತದ ಯೋಜನಾ ಆಯೋಗದ ಸಮಿತಿಯೊಂದು ಆರನೇ ಯೋಜನೆಯಲ್ಲಿ ವಸತಿಗೆ ಮೀಸಲಿಟ್ಟ ಹಣ ಅತೀ ಅಲ್ಪ ಎಂದು ಹೇಳಿರುವುದನ್ನು ನೆನಪಿಸಿಕೊಳ್ಳಬಹುದು. ಇದು ಕೂಡಾ ನಗರಗಳ ಬಡಜನತೆಗೆ ತಲುಪಿಲ್ಲ ಎಂದು ಶ್ರೀ ಎಲ್. ಎಸ್. ಮೆಂಡಿಸ್‌ರ ಅಧ್ಯಕ್ಷತೆಯ ಈ ಸಮಿತಿ ಯೋಜನಾ ಮಂತ್ರಿಯವರಿಗೆ ಸಲ್ಲಿಸಿದ ವರದಿಯಲ್ಲಿ ಹೇಳಿದೆ.

ಫಿಲಿಪೈನ್ಸ್‌ನಲ್ಲೂ ಮಿಲಿಟರಿ ಆಡಳಿತಕ್ಕೆ ವಿರೋಧ

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬೆಂಬಲ ಪಡೆದ ಸರ್ವಾಧಿಕಾರೀ ಆಡಳಿತದ ಪಾಕಿಸ್ತಾನದಲ್ಲಿ ನಡೆಯುವಂತೆ ಫಿಲಿಫೈನ್ಸ್‌ನಲ್ಲೂ ಮಿಲಿಟರಿ ಸರ್ವಾಧಿಕಾರದ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತವಾಗುತ್ತಿದೆ. 11 ವರ್ಷಗಳ ಹಿಂದೆ ಮಾರ್ಕೋಸ್‌ರವರ ಸರ್ವಾಧಿಕಾರ ಆರಂಭವಾದ ಮೇಲೆ ಮೊದಲ ಬಾರಿಗೆ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಸರಕಾರ ವಿರೋಧೀ ಮೆರವಣಿಗೆಗಳು, ಪ್ರತಿಭಟನಾ ಸಭೆಗಳು ನಡೆದಿವೆಯೆಂದು ತಿಳಿದು ಬಂದಿದೆ. ಫಿಲಿಫೈನ್ಸ್‌ನ ಸೇನಾಧಿಪತಿ ಎಲ್ಲಾ ರೀತಿಯ ಮೆರವಣಿಗೆಗಳನ್ನು, ಸಭೆಗಳನ್ನು ನಿಷೇಧಿಸಿದ್ದಾರೆ.

ಸಾಲ್ವಡೋರ್‌ನಲ್ಲಿ ನಾಗರಿಕ ಕಗ್ಗೊಲೆ

ಈ ವರ್ಷದ ಮೊದಲ ಆರು ತಿಂಗಳಲ್ಲಿ ಎಲ್‌ಸಾಲ್ವಡೋರ್‌ನ ಅಮೆರಿಕನ್ ತರಬೇತಿ ಪಡೆದ ಸೇನೆ, ಸಿವಿಲ್‌ಗಾರ್ಡ್ಸ್ ಹಾಗೂ ಬಲಪಂಥೀಯ ಅರೆ ಸೈನಿಕ ಪಡೆಗಳು 2527 ನಾಗರಿಕರುಗಳನ್ನು ಕೊಂದಿವೆ ಎಂದು ಸಾನ್ ಸಾಲ್ವಡೋರ್ ಆರ್ಚ್ ಬಿಷಪ್ ಕಚೇರಿ ತಿಳಿಸಿದೆ. ಇದಕ್ಕೆ ಹೋಲಿಸಿದರೆ ಎಡಪಂಥೀಯ ಗೆರಿಲ್ಲಾಗಳ ವಿಮೋಚನಾ ಹೋರಾಟದಿಂದಾಗಿ ಕೇವಲ 43 ನಾಗರೀಕರು ಪ್ರಾಣ ಕಳಕೊಳ್ಳಬೇಕಾಗಿ ಬಂದಿದೆ ಎಂದೂ ಅದು ತಿಳಿಸಿದೆ. ಅಲ್ಲದೆ ಸರಕಾರೀ ಪಡೆಗಳಿಂದಾಗಿ 541 ಕೈದಿಗಳು ಕಣ್ಮರೆಯಾಗಿದ್ದಾರೆ ಎಂದು ಕಚೇರಿ ತಿಳಿಸಿದೆ

ಮಾರುತಿ ಕಾರು: ಬೆನ್ನು ಬಿಡದ ಪಕ್ಷಪಾತ

ಆರಂಭದಿಂದಲೂ ಅಧಿಕಾರದ ದುರುಪಯೋಗ, ಭ್ರಷ್ಟಾಚಾರ, ಅಪನಂಬಿಕೆಯ ಆಗರವಾಗಿರುವ ಮಾರುತಿ ಸಣ್ಣ ಕಾರಿನ ಯೋಜನೆ ಇನ್ನೂ ಅದೇ ರೀತಿ ಮುಂದುವರೆಯುತ್ತಿದೆ.

ಮಾರುತಿ ಕಾರಿನ ಅರ್ಜಿದಾರರ ಹೆಸರನ್ನು ಕಂಪ್ಯುಟರಿನಲ್ಲಿ ಲಾಟರಿ ಎತ್ತಿ ಆದ್ಯತೆ ಪಟ್ಟಿ ತಯಾರಿಸುವ ಕಳೆದ ಶನಿವಾರದ ಸಮಾರಂಭದಲ್ಲಿ ಗಲಭೆಗಳು ನಡೆದವು. ಪಟ್ಟಿ ತಯಾರಿಸುವಲ್ಲಿ ಅನ್ಯಾಯ, ಒತ್ತಡ ಹಾಗೂ ಪಕ್ಷಪಾತ ಕೆಲಸ ಮಾಡಿದೆಯೆಂದು ಆರೋಪಿಸಿದ ಕರಪತ್ರಗಳನ್ನು ಹಂಚುತ್ತಿದ್ದ ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಡಾ। ಶ್ರೀರಾಂ ಖನ್ನಾರವರನ್ನು ರಕ್ಷಣಾ ದಳದವರು ಹೊರಗೆಳೆದೊಯ್ದರು. ಸಭೆಯೆಲ್ಲಾ "ನಾಚಿಕೆಗೇಡು" ಎಂಬ ಘೋಷಣೆಗಳಿಂದ ತುಂಬಿಹೋಯಿತು.

ಸಂಸತ್ ಸದಸ್ಯರು, ವಿವಿಧ ಸರಕಾರಿ ಇಲಾಖೆಗಳು ಹಾಗೂ ದೊಡ್ಡ ವ್ಯಾಪಾರಸ್ಥರಿಂದ ಬಹಳಷ್ಟು ಒತ್ತಡ ಬಂದಿದೆ ಎಂಬುದನ್ನು ಮಾರುತಿ ಸಂಸ್ಥೆಯ ವಕ್ತಾರರೂ ಖಾಸಗೀ ಮಾತುಕತೆಯಲ್ಲಿ ಒಪ್ಪಿಕೊಂಡಿದ್ದಾರೆಂದು ತಿಳಿದು ಬಂದಿದೆ.

ಐ.ಎಂ.ಎಫ್. ಶರತ್ತಿಗೆ ಬ್ರೆಝಿಲ್ ಕಾಂಗ್ರೆಸ್‌ನ ನಕಾರ

ಬ್ರೆಝಿಲ್‌ನ ಮಿಲಿಟರಿ ಸರಕಾರ ಇತ್ತೀಚೆಗೆ ಅಂತರ್‍ರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತ್ತು. ಆ ಸಾಲದ ಹಲವು ಶರತ್ತುಗಳಲ್ಲಿ ಒಂದು ಹಣದುಬ್ಬರದ ದರದ 80%ಕ್ಕಿಂತ ಹೆಚ್ಚು ವೇತನ ಹೆಚ್ಚಳ ಇರಬಾರದು. ಈ ಶರತ್ತಿಗೆ ಅನುಮತಿ ಕೊಡಲು ಬ್ರೆಝಿಲ್ ಕಾಂಗ್ರೆಸ್ (ಸಂಪತ್ತು) ನಿರಾಕರಿಸಿದೆ. 253 ಸದಸ್ಯರಲ್ಲಿ ಕೇವಲ ಒಬ್ಬಾತ ಮಾತ್ರ ಮಿಲಿಟರಿ ಸರ್ಕಾರಕ್ಕೆ ಬೆಂಬಲ ಸೂಚಿಸಿದ್ದ.

ಈ ಸಾಲವನ್ನು ಭಾರತದಲ್ಲಾದಂತೆ ಬ್ರೆಝಿಲ್‌ನ ವಿರೋಧ ಪಕ್ಷಗಳು ಬಲವಾಗಿ ವಿರೋಧಿಸಿದ್ದವು. ಕಳೆದ ವಾರ ಬ್ರೆಝಿಲ್‌ನ ಕೇಂದ್ರೀಯ ಬ್ಯಾಂಕಿನ ಮುಖ್ಯಸ್ಥ ಕಾಲೊರಸ್ ಲಾಂಗೋನಿ ಈ ಸಾಲದ ಕಠಿಣ ಷರತ್ತುಗಳ ವಿರುದ್ಧ ಪ್ರತಿಭಟಿಸಿ ರಾಜೀನಾಮೆ ನೀಡಿದ್ದರು.

ಸೈಬೀರಿಯಾ ಅನಿಲ ಪೈಪ್‌ಲೈನ್ ಸಂಪೂರ್ಣ

ಸೈಬೀರಿಯಾದಿಂದ ಪ್ರತಿವರ್ಷ ಪಶ್ಚಿಮ ಯುರೋಪಿಗೆ 3000 ಕೋಟಿ ಘನ ಮೀಟರಿನಷ್ಟು ನೈಸರ್ಗಿಕ ಅನಿಲವನ್ನು ಪೂರೈಸಲಿರುವ 4451 ಕಿ.ಮೀ. ಉದ್ದದ ಪೈಪ್ ಲೈನಿನ ಕೆಲಸ ಸಂಪೂರ್ಣಗೊಂಡಿದೆ ಎಂದು ಸೋವಿಯೆಟ್ ಸಂಘ ಪ್ರಕಟಿಸಿದೆ. ತೈಲ ಹಾಗೂ ಅನಿಲ ಕೈಗಾರಿಕೆಯ ಮಂತ್ರಿ ಬೋರಿಸ್ ಶೆರ್ಬಿನಾರ ಪ್ರಕಾರ ಇದು ಯೋಜಿತ ಅವಧಿಗಿಂತ ಎರಡು ವರ್ಷ ಮೊದಲೇ ಪೂರ್ಣಗೊಂಡಿದೆ,

ಈ ಅನಿಲ ಪೈಪ್‌ಲೈನ್ ಪೂರ್ಣಗೊಂಡು ಪಶ್ಚಿಮ ಯುರೋಪಿಗೆ ಸೈಬೀರಿಯಾದಿಂದ ಅನಿಲ ಪೂರೈಕೆ ಆರಂಭಗೊಂಡರೆ ತನ್ನ ತೈಲ ಹಾಗೂ ಅನಿಲ ಕಂಪೆನಿಗಳು ಯೂರೋಪಿನ ದೇಶಗಳ ಮೇಲೆ ಹೊಂದಿದ್ದ ಹತೋಟಿ ಇಲ್ಲವಾಗಬಹುದೆಂಬ ಭಯದಿಂದ ಅಮೆರಿಕಾ ಸಂಯುಕ್ತ ಸಂಸ್ಥಾನ ಇದಕ್ಕೆ ಹಲವು ರೀತಿಯಲ್ಲಿ ಅಡ್ಡಿ - ಆತಂಕವೊಡ್ಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸೋವಿಯೆತ್ ಸಂಘದ ವಿರುದ್ಧ ಆರ್ಥಿಕ ದಿಗ್ಬಂಧನ ಹೊರಿಸಲಾಯಿತು.: ತಂತ್ರಜ್ಞಾನ ಕೊಡುವುದಿಲ್ಲವೆಂದು ಬೆದರಿಸಲಾಯಿತು. ಆದರೆ ಇವು ಯಾವುದರಿಂದಲೂ ಏನೂ ಪರಿಣಾಮವಾಗಲಿಲ್ಲ, ಬದಲಿಗೆ ಅಮೆರಿಕಾ ಹಾಗೂ ಅದರ ಮಿತ್ರರಿಗೆ ಆರ್ಥಿಕ ನಷ್ಟವೇ ಆಯಿತು.

ದಿಗ್ಬಂಧನಗಳ, ಬೆದರಿಕೆಗೆ ಇನ್ನು ಭವಿಷ್ಯವಿಲ್ಲ ಎಂಬುದನ್ನು ಇದು ತೋರಿಸಿಕೊಡುವುದಾಗಿ ಸೋವಿಯೆಟ್ ತೈಲ ಮಂತ್ರಿಯವರು ಹೇಳಿದ್ದಾರೆ.

ಬೆಲೆ ಏರಿಕೆ, ಕಾಂಗ್ರೆಸ್ (ಐ) ಕುತಂತ್ರಕ್ಕೆ ಖಂಡನೆ

(1ನೇ ಪುಟದಿಂದ)

400 ಜನ ಜನಗಣತಿ ನೌಕರರನ್ನು ಸೆಪ್ಟೆಂಬರ್ ಮೂವತ್ತರಂದು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ವಿಧಾನ ಸಭೆ ನಾಯಕರಿಗೆ ಅವರನ್ನು ಬೇರೆ ಇಲಾಖೆಗಳಲ್ಲಿ ನೇಮಕ ಮಾಡುತ್ತೇವೆಂದು ಇತ್ತ ಭರವಸೆಯನ್ನು ಮರೆತು ತೆಗೆದು ಹಾಕಲಾಗಿದೆ. ಈಗ ಅವರು ಬೀದಿ ಪಾಲಾಗಿದ್ದಾರೆ. ಅವರೆಲ್ಲರನ್ನೂ ಕೂಡಲೇ ಸರಕಾರದ ವಿವಿಧ ಗಣತಿ ಕೆಲಸಗಳಲ್ಲಿ ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸುತ್ತವೆ.

ಜನತಾ ಸರಕಾರ ಅಧಿಕಾರಕ್ಕೆ ಬಂದು ಒಂಭತ್ತು ತಿಂಗಳಾದರೂ ಕನಿಷ್ಟ ಕೂಲಿಯನ್ನು ಏರಿಸಿಲ್ಲ. ಕನಿಷ್ಟ ಕೂಲಿಯನ್ನು ರೂ. 15ಕ್ಕೆ ಏರಿಸಬೇಕೆಂದು ಪಕ್ಷವು ಒತ್ತಾಯಿಸುತ್ತದೆ.

ಗಂಗರಾಂ ಕಟ್ಟಡದ ಅವಶೇಷಗಳನ್ನು ತೆಗೆಯುವುದಕ್ಕಾಗಿ ಲೋಕೋಪಯೋಗಿ ಇಲಾಖೆ ಖರ್ಚು ಮಾಡಿರುವ ಹಣವನ್ನು ಅದಕ್ಕೆ ಪೂರ್ಣ ಜವಾಬುದಾರರಾಗಿರುವ ಗಂಗಾರಾಂ ಅವರಿಂದಲೇ ವಸೂಲು ಮಾಡಬೇಕೆಂದು ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷ ಒತ್ತಾಯಿಸುತ್ತವೆ.

ಮತೀಯ ಮತ್ತು 'ದೇಶ ವಿಭಜಕ ಶಕ್ತಿಗಳ' ವಿರುದ್ಧ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ,

ಗಾಯತ್ರಿ ವೆಲ್‌ಫೇರ್ ಅಸೋಸಿಯೇಷನ್‌ನ ಮಹಿಳಾ ಕಾರ್ಮಿಕರ ಬೇಡಿಕೆಗಳಿಗೆ ತನ್ನ ಬೆಂಬಲವನ್ನು ಸೂಚಿಸುತ್ತಾ ಮೈಕೇಲ್ ಫರ್ನಾಂಡಿಸ್‌ರವರ ಉಪವಾಸ ಸತ್ಯಾಗ್ರಹವನ್ನು ಕೊನೆಗೊಳಿಸಲು ಮುಖ್ಯಮಂತ್ರಿಗಳು ಮಧ್ಯಪ್ರವೇಶ ಮಾಡಬೇಕೆಂದು ಒತ್ತಾಯಿಸುತ್ತವೆ.

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ, ಜನ ವಿರೋಧಿ ನೀತಿಗಳ ವಿರುದ್ಧ, ವಿರೋಧ ಪಕ್ಷಗಳ ಬಗೆಗಿನ ಧೋರಣೆಯ ವಿರುದ್ಧ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಿ ಚಳುವಳಿ ನಡೆಸಬೇಕೆಂದು ಕರೆ ನೀಡುತ್ತದೆ.

—ಎಸ್. ಸೂರ್ಯನಾರಾಯಣರಾವ್

Printed & Published by P. Ramachandra Rao by him on behalf of the Communist Party of India (Marxist) Karnataka State Committee K. V. Temple Street Sultanpet, Bangalore-560053. Editorial and managerial office. L-56, K. V.Temple Street, Sultanpet, B-53. Phone: 24154 Editor: P. Ramachandra Rao